ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೩೬

ಸಾಹಿತ್ಯ ಮಾಲೆ – ೭೯

ಪ್ರಧಾನ ಸಂಪಾದಕರು

**ಡಾ. ಪ್ರಧಾನ್ ಗುರುದತ್ತ**

# ನಾನು ನೆನೆವ ಭವಿಷ್ಯ

Blank



# ನಾನು ನೆನೆವ ಭವಿಷ್ಯ

ಇಂಗ್ಲಿಷ್ ಮೂಲ :
**ಚೇತನ ತ್ರಿಪಾಠಿ**

ಕನ್ನಡ ಅನುವಾದ :
**ಓ.ಎಲ್. ನಾಗಭೂಷಣ ಸ್ವಾಮಿ**


**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**NĀNU NENEVA BHAVIṢYA ;** Kannada translation of *The Future I : Recall* by **Sri Chetan Tripathi;** Kannada translation by **O.L. Nagabhushanna Swamy;** Editor-in-Chief : **Dr. Pradhan Gurudatta ;** Published by **Sri P. Narayana Swamy, Registrar, Kuvempu Bhasha Bharathi Pradikara ;** Kalagrama, Jnana Bharathi, Behind Bangalore University Campus, Mallattahalli, Bangalore - 560 056 ; 2012; Pp. xvi + 52; Price : Rs. 30/-

© ಹಕ್ಕುಗಳನ್ನು ಕಾದಿರಿಸಿದೆ

ಮುದ್ರಣ : ೨೦೧೨
ಪುಟಗಳು : xvi + ೫೨
ಬೆಲೆ : ರೂ. ೩೦/–

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಶ್ರೀ ವಿಶ್ವನಾಥ್ ಶೆಟ್ಟಿಗಾರ್**

**ISBN : 978-81-921758-1-2**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೬೨೪



ಕರ್ನಾಟಕ ಸರ್ಕಾರ

**ಜಗದೀಶ್ ಶೆಟ್ಟರ್**
ಮುಖ್ಯ ಮಂತ್ರಿ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಮೊದಲ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ನಿರಂತರವಾಗಿ ಉಪಯುಕ್ತ ಪುಸ್ತಕಗಳ ಪ್ರಕಟಣೆಯೂ ಸೇರಿದಂತೆ ಕನ್ನಡ ನಾಡು ಹಾಗೂ ನುಡಿಯ ವಿಕಾಸಕ್ಕೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಸಂತಸದ ಸಂಗತಿ.

ರಾಷ್ಟ್ರಕವಿ ಕುವೆಂಪುರವರ ಹೆಸರಿನಲ್ಲಿರುವ ಭಾಷಾ ಭಾರತಿ ಪ್ರಾಧಿಕಾರ ತನ್ನ ಹೆಸರನ್ನು ಅನ್ವರ್ಥ ಮಾಡಿಕೊಳ್ಳುವ ರೀತಿಯಲ್ಲಿ ಕ್ರಿಯಾಶೀಲವಾಗಿರುವುದು ಶ್ಲಾಘನೀಯ. ವಿಲ್ ಡ್ಯೂರಾಂಟ್‌ರವರ **''ನಾಗರಿಕತೆಯ ಇತಿಹಾಸ'',** ಜೆ.ಡಿ. ಬರ್ನಾಲ್‌ರವರ **''ಇತಿಹಾಸದಲ್ಲಿ ವಿಜ್ಞಾನ''** ಮುಂತಾದ ಸಂಪುಟಗಳ ಕನ್ನಡ ಅನುವಾದ, ಡಾ. ಬಿ.ಆರ್. ಅಂಬೇಡ್ಕರ್‌ರವರ ಕೃತಿಗಳ ಪರಿಷ್ಕೃತ ಆವೃತ್ತಿಗಳ ಪ್ರಕಟಣೆ, ಭಾರತೀಯ ವಿದ್ಯಾಭವನದ ಸಹಯೋಗದೊಂದಿಗೆ ಹಲವಾರು ಗ್ರಂಥಗಳ, ವೈದ್ಯವಿಜ್ಞಾನ, ವಿಜ್ಞಾನ ತಂತ್ರಜ್ಞಾನಗಳಿಗೆ ಸಂಬಂಧಪಟ್ಟಂತಹ ಬಹುಕ್ಷೇತ್ರಗಳ ಉಪಯುಕ್ತ ಪ್ರಕಟಣೆಗಳ ಹಾಗೂ ಇತರ ಅಗತ್ಯ ಚಟುವಟಿಕೆಗಳ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವ್ಯಕ್ತಪಡಿಸಿರುವ ಬದ್ಧತೆ ಶ್ಲಾಘನೀಯ.

ಕನ್ನಡ ನಾಡಿನ ಜನತೆ ಪ್ರಾಧಿಕಾರದ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಎಲ್ಲ ಪ್ರಕಟಣೆಗಳನ್ನು ಪ್ರೀತಿ ವಿಶ್ವಾಸದಿಂದ ಸ್ವಾಗತಿಸಲಿ ಎಂದು ಆಶಿಸುತ್ತಾ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಎಲ್ಲ ರೀತಿಯಲ್ಲಿಯೂ ಶುಭ ಹಾರೈಸುತ್ತೇನೆ.

**(ಜಗದೀಶ್ ಶೆಟ್ಟರ್)**

ಕರ್ನಾಟಕ ಸರ್ಕಾರ

**ಗೋವಿಂದ ಕಾರಜೋಳ**
ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

೫ ಅಕ್ಟೋಬರ್ ೨೦೧೦

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ಶ್ರೀ ಬಸವರಾಜು**, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ. ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಮಹತ್ವದ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂತ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಬಸವರಾಜು)

ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ,** ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುವಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ



ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ.ಆರ್. ರಾಮಕೃಷ್ಣ)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರು **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ, 



ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಕೋಲ್ಕತ್ತಾದ ರೈಟರ್ಸ್ ವರ್ಕ್‌ಶಾಪ್ (ಸ್ಥಾಪನೆ ೧೯೫೮) ಸೃಜನಶೀಲ ಬರೆಹದ ಪ್ರಕಾರಗಳೇ ಆದ – ಕಾವ್ಯ, ನಾಟಕ, ಕಥಾಸಾಹಿತ್ಯ, ಪ್ರಬಂಧ, ವಿಮರ್ಶೆ ಮತ್ತು ಅನುಸೃಷ್ಟಿಯ ಪ್ರಕಾರಗಳಿಗೆ ಸೇರಿದ ಕೃತಿಗಳ ಪ್ರಕಟಣೆಯ ಕ್ಷೇತ್ರದಲ್ಲಿ ನೂರಾರು ಪುಸ್ತಕಗಳನ್ನು ಹೊರತಂದಿದ್ದು, ಒಂದು ವಿಕ್ರಮವನ್ನೇ ಸ್ಥಾಪಿಸಿದೆ. 'ಆಂಗ್ಲ ಭಾಷೆಯಲ್ಲಿನ ಭಾರತೀಯ ಸಾಹಿತ್ಯ'ದ ಪ್ರಕಟಣೆಯ ವಿಷಯದಲ್ಲಿ ಅದು ಈ ಮೂಲಕ ಒಂದು ಇತಿಹಾಸವನ್ನೇ ಸೃಷ್ಟಿಸಿದೆ. ಪ್ರೊ. ಪಿ.ಲಾಲ್ ಅವರ ನೇತೃತ್ವದ ಲೇಖಕರ ಈ ಸಂಸ್ಥೆಯ ಧ್ಯೇಯವೂ ವಿಶಿಷ್ಟವಾದುದೇ ಆಗಿದೆ : "ಅದು ಸುಪ್ರಸಿದ್ಧ ಲೇಖಕರ ಕೃತಿಗಳನ್ನೇನೂ ಪ್ರಕಟಿಸುವುದಿಲ್ಲ ; ಅದು ಹೆಸರುಗಳು ಪರಿಚಿತವಾಗಲು, ಸುಪ್ರಸಿದ್ಧವಾಗಲು ಕಾರಣವಾಗುತ್ತದೆ." ಹೀಗೆ ಈ ಸಂಸ್ಥೆ ಭಾರತೀಯ ಇಂಗ್ಲಿಷ್ ಸಾಹಿತ್ಯಕ್ಕೆ ಅನುಪಮ ಸೇವೆಯನ್ನು ಸಲ್ಲಿಸುತ್ತ ಬಂದಿದೆ. ಈ ಸಂಸ್ಥೆಯ ವತಿಯಿಂದ ಗ್ರಂಥವೊಂದು ಪ್ರಕಟವಾಗುವುದು ಯಾವುದೇ ಲೇಖಕನಿಗೂ ಗೌರವ–ಅಭಿಮಾನಗಳ ಸಂಗತಿಯೇ ಆಗುತ್ತದೆ.

ಮೇ ೫, ೧೯೮೮ರಲ್ಲಿ ಹಾಸನದಲ್ಲಿ ಹುಟ್ಟಿದ ಚೇತನ್ ತ್ರಿಪಾಠಿ ಅವರು ಮೂಲತಃ ಕರ್ನಾಟಕದವರೇ ಆಗಿದ್ದು, ಬಾಲ್ಯಕಾಲದಿಂದಲೇ ಕಾವ್ಯರಚನೆಯಲ್ಲಿ ಆಸಕ್ತಿಯನ್ನು ತಳೆದವರು. ೧೬ನೆಯ ವಯಸ್ಸಿನ ಹೊತ್ತಿಗಾಗಲೇ ಅವರ ಕಾವ್ಯ ಪ್ರತಿಭೆ ಗರಿಗೆದರತೊಡಗಿತ್ತು. ಬೆಂಗಳೂರಿನ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ ತಮ್ಮ ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿದ ಅವರು ಇಂಗ್ಲೆಂಡಿನ 'ಸ್ಕೂಲ್ ಆಫ್ ಓರಿಯೆಂಟಲ್ ಅಂಡ್ ಆಫ್ರಿಕನ್ ಸ್ಟಡೀಸ್' ಮತ್ತು 'ವಾರ್‌ವಿಕ್ ವಿಶ್ವವಿದ್ಯಾಲಯ'ಗಳಲ್ಲಿ ತಮ್ಮ ಶಿಕ್ಷಣವನ್ನು ಮುಂದುವರಿಸಿ, ಅಂತಿಮವಾಗಿ ರಾಜಸ್ಥಾನದ ಜೋಧ್‌ಪುರದಲ್ಲಿನ 'ನ್ಯಾಷನಲ್ ಲಾ ಯೂನಿವರ್ಸಿಟಿ'ಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡರು. ವ್ಯಾಪಕವಾದ ಪ್ರವಾಸಾನುಭವವನ್ನು ಹೊಂದಿರುವ ತ್ರಿಪಾಠಿಯವರು

ಒಂದು ಅರ್ಥದಲ್ಲಿ ಸತ್ಯಾನ್ವೇಷಕರೇ ಆಗಿದ್ದಾರೆ.

ನಮ್ಮ ನಾಡಿನ ಪ್ರತಿಭಾವಂತರ, ಭಾರತೀಯ ಆಂಗ್ಲಲೇಖಕರ ಪಂಕ್ತಿಗೆ ಚೇತನ್ ತ್ರಿಪಾಠಿ ಅವರೊಂದು ಸೇರ್ಪಡೆ. ೨೦೦೮ರಲ್ಲಿ ಪ್ರಕಟವಾದ 'The Future I Recall' ಮಹತ್ವಪೂರ್ಣ ಕವನ ಸಂಕಲನವಾಗಿ ಹೆಸರುಗಳಿಸಿದೆ. ಇದು ಅವರ ಎರಡನೆಯ ಕವನ ಸಂಕಲನ. ೨೦೦೫ರಲ್ಲಿ ಪ್ರಕಟವಾದ ಇವರ ಮೊದಲ ಕವನ ಸಂಕಲನ 'Dreams in My Eyes' ಸಾಹಿತಿಗಳ, ವಿಮರ್ಶಕರ ಗಮನವನ್ನು ವಿಶೇಷವಾಗಿ ಸೆಳೆದುದಲ್ಲದೆ, ಪ್ರೊ. ದಯಾನಂದ ಅವರಿಂದ ಕನ್ನಡಕ್ಕೂ ಅನುವಾದಗೊಂಡಿತು. ಇದೀಗ ಅವರ ಎರಡನೆಯ ಸಂಕಲನದ ಕನ್ನಡ ಆವೃತ್ತಿ ಹೊರಬರುತ್ತಿದೆ.

೩೭ ಬಿಡಿಗವನಗಳನ್ನು ಹೊಂದಿರುವ ಈ ಕವನ ಸಂಕಲನ ಚೇತನ ತ್ರಿಪಾಠಿ ಅವರ ಜಿಜ್ಞಾಸು ಮನೋಧರ್ಮದ ಸರಳ–ಸುಂದರ ಕವಿತೆಗಳನ್ನು ಒಳಗೊಂಡಿದೆ. ಈ ಕವನಗಳು ಕನ್ನಡ ಸಹೃದಯರ ಪ್ರೀತಿಗೂ ಪಾತ್ರವಾಗುತ್ತವೆಂದು ನಂಬಿದ್ದೇವೆ.

ಈ ಕವನಗಳನ್ನು ಸುಂದರವಾಗಿ ಹಾಗೂ ಅರ್ಥಪೂರ್ಣವಾಗಿ ಅನುವಾದಿಸಿಕೊಟ್ಟಿರುವವರು ಪ್ರೊ॥ ಓ.ಎಲ್. ನಾಗಭೂಷಣ ಸ್ವಾಮಿ ಅವರು. ತಮ್ಮ ಬಿಡುವಿರದ ಕೆಲಸಗಳ ನಡುವಯೂ ಬಿಡುವು ಮಾಡಿಕೊಂಡು ನಮ್ಮೊಡನೆ ಸಹಕರಿಸಿರುವುದಕ್ಕಾಗಿ ಅವರಿಗೆ ನಮ್ಮ ಕೃತಜ್ಞತೆಗಳು.

ಪ್ರಾಧಿಕಾರದ ಕಾರ್ಯಚಟುವಟಿಕೆಗಳ ವಿಷಯದಲ್ಲಿ ವಿಶೇಷ ಆಸ್ಥೆವಹಿಸಿರುವ ಸನ್ಮಾನ್ಯ ಪ್ರಧಾನ ಕಾರ್ಯದರ್ಶಿಗಳಾಗಿರುವ ಶ್ರೀ ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೂತನ ಆಯುಕ್ತರಾಗಿರುವ ಶ್ರೀ ಕೆ.ಆರ್. ರಾಮಕೃಷ್ಣ ಅವರಿಗೂ ನಮ್ಮ ಕೃತಜ್ಞತಾ ಪೂರ್ವಕ ವಂದನೆಗಳು.

ಈ ಅನುವಾದ ಹೊರಬರಲು ಮುಖ್ಯವಾಗಿ ಕಾರಣಕರ್ತರಾಗಿರುವವರು ಹಾಗೂ ಅನುವಾದವನ್ನು ಹೊರತರಲು ಅನುಮತಿಯನ್ನು ದೊರಕಿಸಿಕೊಟ್ಟವರು ಕ.ಸ.ಇಲಾಖೆಯ ಹಿಂದಿನ ಆಯುಕ್ತರಾಗಿದ್ದ ಡಾ. ಮನು ಬಳಿಗಾರ್ ಅವರು, ಅವರಿಗೂ, ಅನುಮತಿ ನೀಡಿ ಸಹಕರಿಸಿರುವ ಶ್ರೀ ಚೇತನ ತ್ರಿಪಾಠಿ ಅವರಿಗೂ ಪ್ರಾಧಿಕಾರದ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಂಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು ೫೬೦ ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ



## ಪರಿವಿಡಿ


| | |
|---|---|
| ಮೊದಲ ಮಾತು | v |
| ಶುಭಾಕಾಂಕ್ಷೆ | vi |
| ಹಾರೈಕೆ | vii |
| ಪ್ರಾಸ್ತಾವಿಕ ನುಡಿ | viii |
| ಪೀಠಿಕೆ | x |
| ನಾನು ನೆನೆವ ಭವಿಷ್ಯ | ೧ |
| ಅಪರಿಚಿತರು | ೬ |
| ರಾಜತಂತ್ರಜ್ಞ | ೭ |
| ಕೈದಿ | ೯ |
| ಪುಟ್ಟದೊಂದು ಆಲೋಚನೆ | ೧೦ |
| ಬೂದಿಯಾದರೂ ಜೀವಂತ | ೧೧ |
| ಸ್ವರ್ಗ ಚುಂಬನ | ೧೩ |
| ಡ್ಯಾಫಡಿಲ್ ಹೂಗಳೊಡನೆ ಒಂದು ಗಳಿಗೆ | ೧೩ |
| ಇಬ್ಬನಿ ಹನಿಯ ಹಾಗೆ | ೧೫ |
| ನನ್ನ ನಂತರ | ೧೬ |
| ಕೊನೆಯಿರದು | ೧೭ |
| ಪರಿಣಾಮ ಸರಣಿ | ೧೯ |
| ಕುಸಿದದ್ದು | ೨೦ |
| ನಿನ್ನಂಥ ದಿನಗಳು | ೨೨ |
| ಭೂತ | ೨೪ |
| ಮರದ ಪ್ರೇಮ ಕಥೆ | ೨೫ |
| ಇವತ್ತು ಹಾಗಿರದಿದ್ದರೆ | ೩೦ |
| ಯಾನ | ೩೧ |
| ವಿರೋಧ | ೩೨ |
| ಸರಿಗಳು | ೩೩ |
| ದೇವತೆ | ೩೪ |
| ಅನ್ಯಾಯವಂತ ಮನುಷ್ಯತ್ವ | ೩೫ |
| ಸಾಯುತ್ತ ಇರುವುದೆಂದರೆ | ೩೫ |

| | |
|---|---|
| ನಿಜವೋ ಅಂದುಕೊಂಡದ್ದೋ? | ೩೮ |
| ಮಳೆ | ೩೯ |
| ತಿರುಗು ಬಾಗಿಲು | ೪೦ |
| ಅಹಂ ಸಮರ | ೪೨ |
| ಎಲ್ಲೋ ಸೂರ್ಯೋದಯ | ೪೩ |
| ಪಳೆಯುಳಿಕೆಯಾದ ಆತ್ಮದ ಮಾತು | ೪೪ |
| ನಿಲ್ಲು | ೪೬ |
| ಅಪೀಲು ಇಲ್ಲ | ೪೭ |
| ಕಳೆದುಹೋದ ಕ್ರಾಂತಿಕಾರಿ | ೪೮ |
| ಸಹಾನುಭೂತಿ | ೪೯ |
| ಬಣ್ಣದ ಆಕಾಶ | ೫೦ |
| ನನ್ನ ಹೊರಗಿನವನು | ೫೨ |
| ವಿಧಿ | ೫೩ |




# ನಾನು ನೆನೆವ ಭವಿಷ್ಯ

## ನಾನು ನೆನೆವ ಭವಿಷ್ಯ

ಎಲ್ಲವೂ ಅಚ್ಚುಕಟ್ಟು.
ದಿನವೂ ತಪ್ಪದೆ ನೋಡುವ ಮೇಲ್ ಬಾಕ್ಸು,
ನೀಟಾಗಿ ಡ್ರೆಸ್‌ಮಾಡಿಕೊಂಡ ರೂಮು,
ಹಾಸುಗೆಯಲ್ಲಿ ಅಚ್ಚರಿಯ 'ಈಈಸ್',
ಏನಿದೆಲ್ಲದರ ಅರ್ಥ?

ಆಗಾಗ, ಪ್ರೀತಿಯಲ್ಲಿ ದೊರೆತದ್ದು ಇಷ್ಟೇ ಆದಾಗ
ಧ್ಯಾನಿಸುತಿತ್ತು ಮನಸ್ಸು:

ಒಬ್ಬಂಟಿಯೋ
ಅಥವಾ ಬರೀ ಕ್ಲೀಜನೋ
ಪಂಕ್ಚುಯಲ್ಲೋ ಅಥವಾ ಅಗತ್ಯವೋ
ಕಂಪೆನಿಯೋ ಅಥವಾ ಕರುಣೆಯೋ...ಏನಾದರಿರಲಿ ಕಾರಣ
'ಅವನಿಗೆ ನಾನು ಬೇಕು, ನನಗೆ ಅವನು ಬೇಕು' ಅಂದುಕೊಂಡಳು.

ಬೆಳಗಿನ ಬಿಸಿಲ ಖುಷಿಯ ಕಿರಣದಲ್ಲಿ ಅವಳನೆಬ್ಬಿಸಿದ.
ನಿದ್ದೆ ಬಂದಿತ್ತೇ ಅವಳಿಗೆ?
ಗಾಢ ನಿದ್ದೆಯಿಂದೆದ್ದ ಬಿಸುಪು ಉಸಿರು, ಗಾರಾದ ತುಟಿ
ಗೊತ್ತಲ್ಲಾ ನವೆಂಬರ್ ತಿಂಗಳ ಥಂಡಿ ಚಳಿ.
ಅವನ ಕಣ್ಣ ದಿಟ್ಟಿಸಿದಳು, ಅಷ್ಟೊಂದು ಪರಿಪೂರ್ಣನ ಬಗ್ಗೆ ಅಚ್ಚರಿಪಟ್ಟಳು.
ಅವನೂ ಅದೇ ಅಂದುಕೊಂಡ, ಇಚ್ಛೆಪಟ್ಟರೂ ತಾನು ಬದಲಿಸಲಾಗದ
ಬಿಂಬದ ಬಗ್ಗೆ.

ಮನುಕುಲ ಇನ್ನೊಂದು ರಾತ್ರಿಯ ಗೆದ್ದು ಉಳಿದಿದೆಯೋ
ನೋಡಲೆಂದು ಎದ್ದು ಹೋದಾಗ ಅವನು

ಒಬ್ಬಳೇ ಇದ್ದಾಳೆ ಹಾಸುಗೆಯಲ್ಲಿ
ಮತ್ತೆ ತನ್ನ ಕವಿದುಕೊಂಡ ಧ್ಯಾನದಲ್ಲಿ;

ಮುಗ್ಧ ಎಚ್ಚರವಿರಲೆಂದು ಬಯಸುತ್ತಾ
ಮನಸಿಗೆ ಬಂದದ್ದನ್ನೆಲ್ಲ ನೆನೆದಳು ಅವಳು,
ಹಿಂದೆ ಎಷ್ಟೋ ಸಲ ಹೀಗೇ ಅನಿಸಿದ್ದು ಮನಸಿಗೆ ತಂದುಕೊಂಡು
ಮುಗಿದೇ ಹೋದ ಕನಸು ನೆನಪಿಗೆ ತಂದುಕೊಂಡು.
ಮತ್ತೆ ಲೇಖಕನೋ ಕವಿಯೋ ಹಾಡುಗಾರನೋ
ಮತ್ತೆ ಪ್ರೀತಿಸುತ್ತಾ ಮಳೆಯಲ್ಲಿ ತಾನೇ ಅವೆಲ್ಲವೂ ಆದಳು.

ತಟ್ಟನೆ ಈ ಒಳ್ಳೆಯ ಪ್ರೇಮಿಗಳ ನಡುವೆ ಮಾತು ಚೆಲ್ಲುವುದು
ಎಷ್ಟೆಲ್ಲ ಮಾಡಿದ್ದು, ಏನೆಲ್ಲ ತಪ್ಪಿದ್ದು,
ಶಬ್ದಗಳು, ದನಿ ಪೆಟ್ಟಿಗೆ ಮೂಲಕ ಸಾಗಿ ಬಂದ ಗಾಳಿ
ಈಗ ಅವಳ ಲೋಕವನ್ನೆ ಬದಲಿಸಿದೆ.

ಅವನ ಕೋಪಕ್ಕೆ ಹುಟ್ಟಿದ ಭೇದ
ಛಿದ್ರಿಸಲು ಬಯಸಿದಳು ಈಗ.
ಎಳೆಯ ಕೋಪ, ಎಳೆಯ ಭೇದ
ಬೆಳದು ದಿಕ್ಕು ದೆಸೆ ಕಂಡುಕೊಂಡೀತು
ಹಾಗಾದಿರಲೆಂದು ಕೆಸರು ಹುದುಲಾಗದಿರಲೆಂದು
ತಾನೇ ನಡೆದಳು ಅವನತ್ತ
'ದಾರಿ ಇದ್ದೀತು–ಇನ್ನು ಮುಂದೆ ಇನ್ನಷ್ಟು ಸ್ವಸ್ಥವಾಗಿರುವೆ' ಅಂದಳು.

ಯುದ್ಧಗಳ ದಾಟಿದ್ದೇನೆ, ನೋವುಗಳ ಉಂಡಿದ್ದೇನೆ,
ಇರುಳ ಕತ್ತಲಲ್ಲಿ ಕರ್ಕಶ ವಿರೋಧ ಎದುರಿಸಿದ್ದೇನೆ–ಆದರೂ ಸ್ವಸ್ಥ...
ಮಾತು ಆಡಿದಮೇಲೆಷ್ಟೋ ವಾಸಿ,
ನರಕ ಮುರಿದುಬಿದ್ದಂತೆ.

ನನ್ನ ಚರಮವಾಕ್ಯ ಹುಡುಕಿದ್ದೇನೆ,
ನನ್ನ ಬದುಕಿನ ಹಾದಿಯ ಮೊದಲಿಗೇ ಯಾರೋ ಕೆತ್ತಿಬಿಟ್ಟಿದ್ದಾರೆ ಅದನ್ನು,
ನಾನು ನಡೆಸಬೇಕಾದ, ವಿಧಿ ಅನುಸರಿಸಬೇಕಾದ ಕಥೆಯನ್ನು.



ಸತ್ಯ ಈಗ ಹೇಳವ, ಗಹನತೆ ಇರದ ಸತ್ಯ.
ಓ, ಓ! ಕರೆದೊಯ್ಯಿ ನನ್ನನ್ನು,
ಈ ಪಾಪಗಳು ಅಗಣಿತ, ಕ್ರೂರಿ, ನಿಷ್ಕರುಣಿ,
ಈ ರೋಗಿಷ್ಟ ಕುರುಡು ಜಗತ್ತಿನಲ್ಲಿ ನಾವೇನು ಮಾಡಬಲ್ಲೆವು
ಈ ಹಿಂಸೆಗೆ ಈ ಲಜ್ಜೆಗೆ
ಯುದ್ಧ ಮತ್ತೆ ನೋವು
ಎಲ್ಲರೂ ಬಂದು ಬಂದು ಕೊಲ್ಲುತ್ತಾರೆ
ಮತ್ತೆ ಗಂಡಸರೂ ಅದನ್ನೇ ಮಾಡುತ್ತಾರೆ.

ಓ, ಓ! ಕರೆದೊಯ್ಯಿ ನನ್ನನ್ನು
ನಿನ್ನೆದುರು ನಾಚಿಕೆ ಇಲ್ಲದೆ ಅಳುವೆ,
ಬದುಕಿನ ಉತ್ಸಾಹವೇ ಮುಳುಗಿ
ಆಶಾವಾದಿ ಸತ್ತು ನಿರಾಶಾವಾದಿ ಅಹಂಕಾರಿಯಾಗಿ
ಈ ಜಗತ್ತನ್ನು ನೋಡಲಾರೆ,
ಯಾರಿಗೂ ಸಿಗಲಾರದಷ್ಟು ಕುರುಡು ಆಗಿರುವೆ,
ಬೇಸಗೆಯ ಮಳೆ, ಕಾಯುವ ಹಿತ ಬಿಸಿಲು, ಬೆವರೋ ಗಂಧವೋ
ರಾತ್ರಿಯಲಿ ನಕ್ಷತ್ರಗಳು, ಗಾಳಿ, ಸ್ಪರ್ಶ; ಈಗ ನಾನೇ ಸತ್ತ ಹಾಗೆ ಸಪ್ಪೆ ರುಚಿ,
ಕುಡಿದಿದ್ದೇನೆ, ಆದರು ಏನೂ ಅನಿಸುತ್ತಿಲ್ಲ,
ಚಂದ್ರನನ್ನು ನೋಡಿ ಅಂದುಕೊಂಡೆ–ಯಾಕಿಷ್ಟು ಶುಷ್ಕ, ನನಗೆ ಸ್ಟಾಯಿಕ್
ಶಿಲೆಯಾಗಬೇಕಾದದ್ದು
ಹೃದಯ ಕೂಡಿಸಬೇಕಾದದ್ದು;
ಒಮ್ಮೆಗೇ ಚಲುವಾಗಿ ಮತ್ತೆ ಈಗ ನನಗೆ ಹಳಸಲಾಗಿ; ನಾಚಿಕೆಗೇಡು ಅಷ್ಟೇ
ಇನ್ನೇನಿಲ್ಲ,
ಮೊದಲಿಗೇ ಹೇಳಿದ್ದ ಶಕನದ ದೃಶ್ಯಗಳು–ಅದು ಬಿಟ್ಟು ಅವರಿಗೆ ಇನ್ನೇನೂ
ಕಾಣುವುದಿಲ್ಲ.
ನಿನಗೂ ಇಲ್ಲ, ನನಗೂ ಇಲ್ಲ ಪ್ರೀತಿ,
ನಿನಗೆ ಬೇಕಾದ್ದು ಹೇಳಬಹುದು,
ಎಲ್ಲವನ್ನೂ ಕ್ಷಮಿಸುತ್ತೇನೆ, ನೀನು ಹೇಳುವುದು ನಿಜವೆಂದು ನನಗೆ ಗೊತ್ತು.

ಹಾಗನ್ನಬೇಡ, ಮತ್ತೇನೂ ಹೇಳಬೇಡ,
ನನ್ನಲ್ಲಿರುವುದು ಹುಟ್ಟಬಹುದಾದ ಪ್ರೀತಿಗಿಂತಲೂ ಮಿಗಿಲಾದ ದ್ವೇಷ;
ನಿನ್ನ ಅತ್ಯಂತ–ಆಗಿರುವುದು ಎಷ್ಟು ನೋವಿನ ಕೆಲಸವೆಂದು ನಿನಗೆ ಗೊತ್ತು.

ಗೊತ್ತು, ಇನ್ನೂ ಗೊತ್ತು,
ಅತ್ಯಂತ ಪ್ರೀತಿಯ, ವಿಶ್ವಾಸದ, ಧೈರ್ಯದ, ಇತ್ಯಾದಿ ಪದಗಳೆಲ್ಲ ಕೇವಲ ಧೂಳು,
ನೀನು ತಣ್ಣಗಾಗುತ್ತೀಯ ಅನ್ನುವ ಅಂಜಿಕೆ ಇಲ್ಲ ನನಗೆ;
ಭಯ ಮತ್ತೆ ನೋವು ತುಂಬಿದವರು ಮಾತ್ರ ತಣ್ಣಗಾಗುತ್ತಾರೆ;
ನರಳಾಟ ಮಳೆಯಂತೆ ಸುರಿಯುವುದು ಅವರ ಬದುಕಿನಲ್ಲಿ, ಬೀಳುವ
ಬಿಸಿಲೂ ಕಪಟ.
ಆದರೆ ನೀನು; ನಿಜವಾದ ಟ್ರಾಜಿಡಿ ನಿನಗೆ ಗೊತ್ತು
ಬೇಕಾದಾಗ ಧೈರ್ಯ ಒದಗಿಬರುತ್ತದೆ
ನಿಜವೆಲ್ಲವೂ ಅತೀ ನಿಜ ನಿನಗೆ
ಜನ ಅಬ್‌ನಾರ್ಮಲ್ಲು ಮತ್ತು ಅವಿಚಾರಿಗಳು,
ಸಾಕು, ಬೇಡದ ಮಾತು ದಣಿಸುತ್ತದೆ–ಭಯವೇ ಇಲ್ಲದ ವಾಗಾಡಂಬರ,
ನಂಬುತ್ತೀಯಾ, ನಂಬುತ್ತೀಯಾ ನಈನು,
ಉತ್ತರ ಕೊಡುವ ತನಕ ಬಿಡುವುದಿಲ್ಲ ಡಿಯರ್.

ಧೈರ್ಯವಿದೆಯೇ ಅಂತ ಕೇಳುವ ಧೈರ್ಯವೇ,
ಭಯದ ಬಗ್ಗೆ ಭಾಷಣಕೊಡುವುದೇ ನನಗೆ,

ನಿನಗೆ ಭಯವಾಗಿದೆಯೇ? ನಿನಗೆ ಭಯವಾಗಿದೆಯಾ?

ಅಂಜಿಸುತ್ತೇನೆ ಅಂದುಕೊಂಡಿದ್ದೀ,
ಸುಮ್ಮನೆ ಕೋಪ ಬರುವ ಹಾಗೆ ಮಾಡುತ್ತೀ ಅಷ್ಟೆ.

ನಾಚಿಕೆಯಾ? ಭಯವಾ?

ನಿಲ್ಲಿಸು ಈ ನಾನ್‌ಸೆನ್ಸ್. ನಿಲ್ಲಿಸು.

ಭಯವಾ?

ದಮ್ಮಯ್ಯ ಸಾಕು,
ನೀನು ತೀರಾ ನಿಜ.



ನನ್ನ ಕಂಬನಿ ಕಾಣುತ್ತಿದೆ,
ಉದುರಿಸಬೇಡ,
ಯಾಕೆ ಭಯ? ಯಾಕೆ ಭಯ?
ಅವಳ ಸೂಕ್ತಿಗೆ ಅರ್ಥವಿತ್ತು,
ಪ್ರತಿಭಟನೆಯೋ ಪಶ್ಚಾತ್ತಾಪವೋ,
ಒಂದು ಗಳಿಗೆ ಹೆಪ್ಪುಗಟ್ಟಿ,
ಅಪ್ಪಿಕೊಂಡಳು, ಅತ್ತದ್ದು ತಡವಾಗಲಿಲ್ಲ,
ಅವನು ಒಳಗೆ ಬಚ್ಚಿಡಬೇಕೆಂದಿದ್ದದ್ದನ್ನೆಲ್ಲಾ ಹೊರಗೆ ತೆಗೆದಳು.
ಕಲ್ಲಾದ ಭಾವಗಳು;
ಅದಕ್ಕೇ ಅಳಬೇಕು ನಾವು,
ಅಹಂಕಾರದ ಮನಸ್ಸಿಗೆ
ಅಳುವನ್ನು ಹೊರ ಹಾಕುವುದು ಕಷ್ಟ; ಮರ್ಯಾದೆಯಲ್ಲ.

## ಅಪರಿಚಿತರು

ಅಪರಿಚಿತರು ನಾವು
ಸಂತವಿರದ ಲೋಕದಲ್ಲಿ.

ಬೇರೆಯವರ ಅಪರಾಧ
ಅಟ್ಟಿ ಬಂದ ಬೇಟೆ ಮಿಗಗಳು.

ಎಂದೂ ಭೇಟಿಯಾಗದ
ಮೋಡಗಳ ದಿಟ್ಟಿಸುವೆವು.

ಪರಿಚಿತ ಲೋಕದಲ್ಲಿ
ಅಪರಿಚಿತರಾಗಿರುವುದೆಷ್ಟು ವಿಚಿತ್ರ...



## ರಾಜತಂತ್ರಜ್ಞ

ಅಖಂಡ ಸುಳ್ಳು
ಹಾಸು ಹೊಕ್ಕು ಸುಳ್ಳು
ಸತ್ಯದ ಹೊಳೆ ದಾಟಿದ ಸುಳ್ಳು–ಕಂಡಿದ್ದೇನೆ
ಒಂದಿಷ್ಟು ಪಶ್ಚಾತ್ತಾಪ ಹೊರೆ; ತಣ್ಣಗೆ ಕೊರೆವ ಮುಖಗಳು.

ಸತ್ಯಗಳಾಗುತ್ತವೆ ಸುಳ್ಳುಗಳು
ಮತ್ತೆ ನಾವು...ಭ್ರಮೆಗಳು.
ಬದಲಾದೇವೋ...ಬೀಳುತ್ತೇವೋ.
ಈಗ ಯುದ್ಧವು ವಾಸ್ತವ.

ದಿಟ್ಟಿಸುವ ಬಿಗಿದ ತುಟಿ,
ಖಾಲಿ ಮುಖ ಎಷ್ಟೊಂದು ಮಾತಾಡುತ್ತದೆ.
ಅನ್ನಿಸಿದ್ದು ಆಡದಿರುವುದು ನಮ್ಮ ನಲುವು,
ಕೊನೆ ಇದುವೇ–ನಂಬಲಾಗದಷ್ಟು ಎತ್ತರದಲ್ಲಿದ್ದೆವು.

ಅತೃಪ್ತ ಸುಳ್ಳು
ತಳಮಳಿಸುವ ಸುಳ್ಳು
ಪ್ರೀತಿಯ ಪರೀಕ್ಷೆ ಹಾದು ಬಂದ ಸುಳ್ಳು ಕಂಡಿದ್ದೇನೆ.
ಒಂದಿಷ್ಟು ಸಂಶಯ ಹೊರೆ; ಛಿದ್ರ ಹೃದಯಗಳು.

ದಿನಗಳಾಗುತ್ತವೆ ಕ್ಷಣಗಳು,
ಮಾಯವಾಗುತ್ತೇನೆ.
ಕಂಡರೆ ನಾನು ಎಲ್ಲವೂ ಅಸ್ತವ್ಯಸ್ತ,
ಕಾಲವಾಗುವುದು ಮರುಳು.

ದಿಟ್ಟಿಸುವ ಸತ್ತ ಕಣ್ಣು
ಎಷ್ಟೊಂದೆಲ್ಲ ಹೇಳುವ ನಮ್ಮ ಖಾಲಿ ಮುಖಗಳು.
ಏನಾಗಬೇಕೋ ಅದನ್ನು ಆಡದಿರುವುದು ನಮ್ಮ ನಿಲುವು.
ಇದೇ ಎಲ್ಲವೂ–ನಂಬಲಾಗದಷ್ಟು ಎತ್ತರದಲ್ಲಿದ್ದೆವು.



## ಕೈದಿ

ನಡೆದಾಡುತ್ತೇನೆ
ಬಿಗಿದ ಸರಪಳಿಯೊಳಗೆ ಕಂಗಾಲಾಗಿ.
ನಿಷ್ಕರುಣಿ ವಿವೇಕಹೀನ ಅಪ್ರಮಾಣ

ವಿಧಿ

ಕೊಂದಿತು ನನ್ನ.
ಅಡ್ಡಗಟ್ಟಿ, ಬಾಯಿ ಬಿಗಿದು ನನ್ನ ಕುಗ್ಗಿಸಿಬಿಟ್ಟಿತು.
ಏನು ಮಾಡಲಿ ಅದಕ್ಕೆ?

ಭಗ್ನ, ನಿರ್ಧನ, ಪರಾಜಿತ
ನಾನು ಆಗಿದ್ದೇನೆ
ನನ್ನಂತೆ...ಹೇಳಿ ಎಲ್ಲಿ
ವಾಕು...ಡಾನ್ಸು...ಹಾಡು...ಮೋಜು
ಈ ನಿರ್ಜೀವ ನಿಧಿಗೆ;
ಯಾರು? ಯಾರ ಅದು?
ಅಣಕಿಸುವುದು ನೋಡಿ ನನ್ನ; ಮತ್ತೆ, ಇನ್ನೂ ಮತ್ತೆ!
ದುರುಗುಟ್ಟುವುದು ಇಡೀ ದಿನ...ಹಿಡಿಯಲು ಹೋದರೆ

ಅಯ್ಯೋ ವಿಧಿ;

ಹಿಡಿದೆನೋ ಆಗಲೇ ಮಾಯ.
ಎಚ್ಚರ, ಎಚ್ಚರ...ಸೈರನ್ನಿನ ಕೂಗು.
ಅದೃಶ್ಯ, ಆದರೂ ಅಜೇಯವಲ್ಲ

ನಾನೂ ಈ ಅಪರಾಧ ಮಾಡಬಲ್ಲೆ.

## ಪುಟ್ಟದೊಂದು ಆಲೋಚನೆ

ತಮಾಷೆಯಂಥ ಕತ್ತಲು ಒಳಗೆ,
ಲೋಕದ ಕಣ್ಣಿಗೆ.
ನನ್ನ ಕಣ್ಣಿಗೆ ಸ್ವರ್ಗದಂತೆ.

ಸ್ವರ್ಗ ಮನೆಯ ಹಾಗಲ್ಲ.
ಮನುಷ್ಯತನ ಕೊನೆಯಾಗುವ
ದುರದೃಷ್ಟ ಕ್ಷಮೆಯನ್ನು ಕಲಿಸುವ
ಮೌನವು ಶಕ್ತಿಯನ್ನು ತುಂಬುವ ವಿಚಿತ್ರ ಸೀಮೆ.
ಗೊತ್ತಿಲ್ಲದವರಾಗುವುದು ಈಗ...ಒಂದುಸುರಿನಷ್ಟೆ ದೂರ.

## ಬೂದಿಯಾದರೂ ಜೀವಂತ

ಕಂಬನಿಯೊಳಗಿವೆ ಭಯಗಳು...
ಏನಾಗಲಿಲ್ಲವೋ ಅದಕ್ಕಾಗಿ ಗೋಳು...
ಯಾವಾಗಲೂ ಇದ್ದ ಯಾವಾಗಲೂ ಇರುವ...
ಅದಕ್ಕೆ ವಾಪಸ್ಸಾದಾಗ...ಎಲ್ಲ ಮಾಯೆ ಸತ್ತು...
ಕನಸುಗಾರನನ್ನು ಕನಸು ಮುಗಿಸಿ...ಮರು ಹುಟ್ಟಿಗೆ ಕಾಯುವುದು.



## ಸ್ವರ್ಗ ಚುಂಬನ

ಸ್ವರ್ಗದ ಚುಂಬನ ಹುಸಿಯಲಾರದು
ಹತಾಶ ಕಾಲದಲ್ಲಿ ಇಬ್ಬನಿ ಹನಿಯ ಕಂಬನಿ
ನಮ್ಮ ನೋವು ಸುಮ್ಮನಾಗಿಸಲು ಏನೂ ಮಾಡಲಾರೆವು
ಮುಂದೆ ಮುಂದೆ, ಹಗಲು ಇರುಳಾಗಿ ಮತ್ತೆ ಮತ್ತೆ
ಚಿಂತನೆ ಬಳಲಿ ಚೀರುವವರೆಗೆ
ನಡುಹಗಲನ್ನು ನಡುರಾತ್ರಿ ಸುಡುವವರೆಗೆ
ನೋವು ಸಾಯಲೇ ಇಲ್ಲ.

ಹತಾಶ ಕಾಲದಲ್ಲಿ ಮೂಡಿತು ಇಬ್ಬನಿ ಹನಿಯ ಕಂಬನಿ
ತೋರಿತು ಲೋಕಕ್ಕೆ
ಅಂದಿನ ಆನಂದವನ್ನು, ಹರಳುಗಟ್ಟಿದ ಸಂತೋಷವನ್ನು. ಕಲ್ಲಾಗಿ ನಾವು
ತೋರಿದೆವು ಲೋಕಕ್ಕೆ
ನಾವು ಕ್ಷೇಮವೆಂದು, ಖುಷಿಯಾಗಿದ್ದೇವೆಂದು.

ಆದರೂ ತಿಳಿದುಕೋ ಮಗೂ
ಸ್ವರ್ಗದ ಚುಂಬನ ಹುಸಿಯಲಾರದು
ಬದುಕು ನೀನು...ಆಗಾಗ ತಟ್ಟಾಡಿ ತಡವರಿಸಬಹುದು
ಆದರೂ ತಗ್ಗುವುದು ನೋವು ಇಳಿಯುವುದು
ನಿನ್ನ ತಪ್ಪಲ್ಲ ಅದು
ಕಾಲದ ಪುಟ್ಟದೊಂದು ಅಪರಾಧ
ಬೇಡ ಅನುತಾಪ
ಸ್ವರ್ಗದ ಚುಂಬನ ಹುಸಿಯಲಾರದು.

## ಡ್ಯಾಫಡಿಲ್ ಹೂಗಳೊಡನೆ ಒಂದು ಗಳಿಗೆ

ಸುಮ್ಮನೆ ಇರಬಹುದಾದ ದಿನಗಳು
ಬಹಳವಿಲ್ಲ ಅನ್ನುತ್ತಾರೆ, ನಿರಾಳವಾಗಿ ಕೂತು
ದಿನ ಸರಿಯಲು ಬಿಟ್ಟು ಹಾಗೇ
ನಿದ್ದೆ ಹೋಗುತ್ತಾ
ಎಲ್ಲವನ್ನೂ ಬಯಸುತ್ತಾ ಹಂಬಲಿಸುತ್ತಾ
ಮರ, ಹೂ, ಪ್ರೀತಿ, ಹಳೆಯ ಬದುಕಿನ ರೀತಿ,
ಕಾಣುತ್ತಿರುವುದೋ ಕನಸೋ ಏನಾದರೇನು
ಓ! ಈ ದಿನ ಎಷ್ಟು ನಿಜ.

ಡ್ಯಾಫಡಿಲ್ ಬಗ್ಗೆ ಹೇಳಿದೆನಾ?
ಈ ತಣ್ಣನೆ ಬೆಟ್ಟದ ತುದಿಯಲ್ಲಿ
ಜೀವಂತವಿರುವುದು ಅದೊಂದೇ.
ಮನಸ್ಸು ನೇವರಿಸುವ ಧೈರ್ಯದ ಕತೆ ಅದರದ್ದು.

ಬಂದಿವೆ, ನನ್ನ ಹಾಗಲ್ಲ,
ಯೋಧರ ಹಾಗೆ;
ಇರುವುದನ್ನೆಲ್ಲ ಒಯ್ಯಲು;
ಅದರೆ ಉಳಿದಿವೆ
ಅದೃಷ್ಟವಶಾತ್ ಶಾಂತಿಯ ಸೀಮೆಯೊಳಗೆ.

ಇಷ್ಟೊಂದು ದಿನ ಬದುಕಿದ್ದೇನೆ ನಆನು,
ಆದರೆ ಇಷ್ಟೊಂದು ಬದುಕಿಲ್ಲ.

ಒದ್ದೆ ಕಣ್ಣಲ್ಲಿ ಕಂಬನಿ ತುಂಬಿ,
ನನ್ನೊಳಗಿನ ಅರಾಜಕತೆ ಇಲ್ಲದೆ ಶಾಂತವಾಗಿ,



ಏನು ಮಾಡಲಿ?
ಬಿಟ್ಟು ಹೋಗಲಾರದ ತಾವಿಗೆ ಬಂದಿರುವೆ,
ಓ ತಾರಾ ರಾಶಿಗಳೇ! ಈ ಒಂದು ಬಯಕೆ ಸಲಿಸಿ,
ನಾನು ಡ್ಯಾಫೊಡಿಲ್ ಆಗಿ, ಡ್ಯಾಫೊಡಿಲ್‌ನೊಡನೆ ಇರುವ ಬಯಕೆ.

## ಇಬ್ಬನಿ ಹನಿಯ ಹಾಗೆ

ಯಾರಿಗೆ ಗೊತ್ತು...
ನಮಗೆ ಗೊತ್ತಿರುವ ಉತ್ತರಗಳೆಲ್ಲಾ
ನಮ್ಮೊಳಗೆ ಇರುವುದೆಲ್ಲಾ ಉದುರಲು ಬಯಸುತಿರಬಹುದು
ನಿಷ್ಠಾವಂತ ಇಬ್ಬನಿ ಹನಿಯ ಹಾಗೆ...

ನಾನೆಂದೂ ಉದುರೆನೆಂದುಕೊಂಡು
ಒಂದೊಂದೂ ಎಲೆಯ ತುದಿಯಲ್ಲಿ ಕೂತಿರುವ ಹನಿಯೇ ಚೆಲುವು.
ಅಂಥ ಹನಿ ನಾನಾಗಬೇಕೆಂದು...ಕನಸು ಅಷ್ಟೆ.

ಉದುರು!
ತೇಲು!
ಸಾಗು!

ತಣ್ಣಗೆ ವಿರಮಿಸುತ್ತಾ
ಸುಮ್ಮನೆ ಆಕಳಿಸುತ್ತಾ ಮುಗ್ಧವಾಗಿ ಕಾಯುತ್ತಾ
ಇನ್ನಿಲ್ಲವೇ ಇಲ್ಲವಾಗುವುದು ಮಾತ್ರ ದೈವತ್ವ ಪಡೆವುದು.

ಯಾಕೆಂದರೆ ಬದುಕು
ಉದುರುವುದು!
ತೇಲುವುದು!
ಸಾಗುವುದು!



## ನನ್ನ ನಂತರ

ನಾನು ಆಗಿಹೋದ ಮೇಲೆ ಇನ್ನೇನು?

ನಾನು ಸತ್ಯದ ಕೇಂದ್ರವೋ ಅಥವಾ ಒಂದು ಅಂಶವೋ?

ನಾನು ಕಾರಣವೋ ಅಥವಾ ಉತ್ಪತ್ತಿಯೋ?

ನಾನು ತಿಳಿಯುವೆನೋ ಅಥವಾ ಉತ್ತರ ಸಿಗದೋ?

ಯಾಕೆಂದರೆ...

# ಕೊನೆಯಿರದು

ಮೊದಲಿಗೆ, ಎರಡನೆಯ ಮಗುವಿನ ಕಥೆ:

ಒಂದೇ ಮಗುವೋ ಕೊನೆಯ ಮಗುವೋ ಆಗಿದ್ದರೆ
ಶಾಪ ಹೊತ್ತು ಬಂದಿರುತ್ತದೆ
ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ; ಕಾರಣ, ನೀವೇ ಹುಡುಕಿಕೊಳ್ಳಿ.

ನನ್ನ ಕಥೆ:

ಎರಡನೆಯವನಾಗಿ ಹುಟ್ಟಿ
ಆದರೂ ಶಪಿತನಾಗುವುದು,
ನಾನಾಗಿರುವುದು, ಅಯ್ಯೋ.
ಎಂಥಾ ಮನಸ್ಸು...ಎಷ್ಟೊಂದು ಅನಿಶ್ಚಿತ.
ಯಾವುದನ್ನು ನಂಬಬೇಕು, ನಿಜವಾಗಲೂ ಗೊತ್ತಿಲ್ಲ
ಯಾವುದನ್ನು ಬಿಡಬೇಕು ಅನ್ನುವುದು ಕೂಡಾ.
ಸೆಣಸಾಡಿದಷ್ಟೂ
ಅಷ್ಟೂ ದುರ್ಬಲ.
ತೀರ ಗಟ್ಟಿಯಾಗಿ ನಿಮಗೇನನ್ನಿಸುತ್ತದೆ,
ನೆರಳ ಹಾಗೆ ನನ್ನ ಹಿಂಬಾಲಿಸಿ ನೋಡುತ್ತೀರಲ್ಲಾ?
ಸಾವಿನ ಭಯ, ನನ್ನಲ್ಲಿ...ಸತ್ತಿದೆ.

ಮಿಕ್ಕ ಮರ್ತ್ಯರ ಹಾಗೇ ನಾನೂನೂ
ಅನ್ನುತ್ತೀರಾ ಹಾಗಾದರೆ?
ನನ್ನದಾಗಬಹುದಾದ ಎಲ್ಲ ಆತ್ಮಗಳನ್ನೂ
ಜೊತೆಗೆ ಕರಕೊಂಡು ಬನ್ನಿ.
ತಲೆ ಕೆಟ್ಟು ಹುಚ್ಚು ಹಿಡಿಯುತ್ತದೆ



ನಾನು ಬೇರೆ ಯಾರೂ ಅಲ್ಲ, ಬೇರೆ ಯಾರೂ ನಾನಲ್ಲ.
ನೆರಳ ಹಾಗೆ ನನ್ನ ಹಿಂಬಾಲಿಸಿ ನೋಡುತ್ತೀರಲ್ಲಾ?
ಸಾವಿನ ಭಯ, ನನ್ನಲ್ಲಿ...ಸತ್ತಿದೆ.

# ಪರಿಣಾಮ ಸರಣಿ

ಮುರಿಯುವುದಕ್ಕೆ ಕಟ್ಟುತ್ತಿದ್ದೆ ನಾನು
ಕಟ್ಟುವುದಕ್ಕೆ ಮುರಿಯುತಿದ್ದಳು ಅವಳು.
ಬದಲಾಗುತ್ತೇವೆ ಅಂದುಕೊಂಡಿದ್ದೆವು.
ಆಟದಷ್ಟೇ ಸುಲಭವಾಗಿದ್ದದ್ದರೆ ಎಲ್ಲವೂ...

ಮುರಿಯುವುದಕ್ಕೆ ಕಟ್ಟುತ್ತೇನೆ
ಕಟ್ಟುವುದಕ್ಕೆ ಮುರಿಯುತ್ತಾಳೆ.
ಈಗ ನಾವು ಮಾಡುತ್ತಿರುವುದನ್ನು
ನಾವೇ ಶುರುಮಾಡಿದೆವೋ?
ಆದಿಯೇ ಇರಲಿಲ್ಲ.
ಊಹೆಗಳು ಅನಿಸಿಕೆಗಳು ಹಾಗಿರಲಿ.
ಹೀಗೆಂದು ಯಾರೂ ವಿವರಿಸಲಾಗದ್ದು ಈಗ ಇದೆ:
ನಿಂದನೆಯಿಲ್ಲದ ನೋಟ
ಮುರಿಯುವುದಕ್ಕಾಗಿ ಕಟ್ಟಿಕೊಳ್ಳುತ್ತಿದೆ.

ಮುರಿಯುವುದಕ್ಕೆ ಕಟ್ಟುತ್ತೇನೆ
ಕಟ್ಟುವುದಕ್ಕೆ ಮುರಿಯುತ್ತಾಳೆ.
ಆಗುತ್ತಿರುವುದನ್ನು ತಾಳಲಾರೆ.
ಕೊರತೆ ಕೂಡ ತಿಳಿಯುತ್ತಿಲ್ಲ.
ಯಾರು ಶುರುಮಾಡಿದ್ದು ಅನ್ನುವುದು ಗೊತ್ತಿಲ್ಲದ ಇದನ್ನು
ಮುಗಿಸಲೋ ಮತ್ತೆ ಶುರುಮಾಡಲೊ?
ಇರಲೋ, ಬಿಟ್ಟು ಹೋಗಲೋ–
ಯಾರೂ ತೋರದ ದೆಸೆಗೆ?

ಅವಳೊಂದು ನಾಡಿನಲ್ಲಿ, ನಾನಿನ್ನೊಂದರಲ್ಲಿ, ಭೇಟಿಯೇ ಇಲ್ಲ.
ಮುರಿಯುವುದಕ್ಕೆ ನನಗೇನಿದೆ, ಕಟ್ಟುವುದಕ್ಕೆ ಅವಳಿಗೇನಿದೆ?

## ಕುಸಿದದ್ದು

ಕನಸು ಕಾಣಲಾಗದೆ ಮೆಟ್ಟಿಬಿದ್ದು ಕುಪ್ಪಳಿಸಿದ್ದು
ಯಾರೋ ಚೀರಿದ ಹಾಗೆ ಕೇಳಿದ್ದು
ನಿನ್ನ ಮನಸಿನ ಹುಚ್ಚು ನನಗೂ ತಟ್ಟಿದೆ
ಎಲ್ಲವೂ ಕುಸಿಯುತಿದೆ.

ನೀನು ಹೆಣಗಿದೆ, ನಾನು ಕೆದಕಿದೆ;
ಎಲ್ಲಾ ಚೆನ್ನಾಗಿತ್ತು, ಅಚ್ಚುಕಟ್ಟಾಗಿ ಹೊಂದಿಕೊಂಡಿತ್ತು,
ಇರುವುದೆಲ್ಲ ಈಗ ಕುಸಿಯುತಿದೆ,
ಹಾಗೇ ಬಿಟ್ಟರೆ ನಾನು,
ಅಂಥ ನೋವು ಪಡಲು ತಕ್ಕುದಲ್ಲ...ಅದಕ್ಕೇ ಎಲ್ಲಾ ಬಿಟ್ಟು ಓಡಿದ್ದೇನೆ

ನೀನಿಲ್ಲಿಗೆ ಬರುವ ಮೊದಲು, ನೀನು ಸಿಗುವ ಮೊದಲು
ನಾನು ಖುಷಿಯಾಗಿದ್ದೆ, ಈ ಪೆದ್ದ ಸಂಗತಿಗಳಿಗೆ ತಲೆಕೆಡಿಸಿಕೊಳ್ಳುವುದಿರಲಿಲ್ಲ
ಎಲ್ಲಾ ಪರಿಪೂರ್ಣವಾಗಿತ್ತು, ಇರುವುದೆಲ್ಲಾ ಸುಳ್ಳು, ಕಪಟ
ಅಂತ ನಿನಗೆ ಗೊತ್ತಾಗುವವರೆಗೆ
ಹಾಗಾಗಿ ಇಗೋ ಇಲ್ಲಿದ್ದೇನೆ ನಾನು.

ಧೈರ್ಯಸ್ಥ ಈಗ.
ಕುಸಿಯಲಿ, ಕುಸಿಯಲಿ, ಕುಸಿಯಲಿ
ಎಲ್ಲಾ ಕುಸಿಯಲಿ, ಯಾಕೆಂದರೆ ನಾನಾಗಲೇ ಹೊತ್ತಿದ್ದೇನೆ
ನಿನ್ನೂ ಜೊತೆಗೆ ಒಯ್ಯಬಲ್ಲೆ.

ಪ್ರಯತ್ನಪಟ್ಟರೆ...ಹಾರಬಹುದು ನೀನು
ಯಾಕೆಂದರೆ ಇದು ಅಷ್ಟು ಭಾರ; ಅದು ಹೊತ್ತು ನಾನು ನಡೆಯುತ್ತೇನೆ ಹೇಗೆಂದು
ಮೈಮರೆತು ನೀ ಮರುಳಾಗಬಹುದು.



ನಿನಗೇನು ಗೊತ್ತು; ನಿನ್ನತನವನೆಲ್ಲ ಕಿತ್ತುಕೊಂಡ ಎಲ್ಲದರಿಂದ
ಓಡುವುದರಲ್ಲೇ ಮುಳುಗಿದ್ದೆ ನೀನು.

ನೀನಿಲ್ಲಿಗೆ ಬರುವ ಮೊದಲು,
ನೀನು ಸಿಗುವ ಮೊದಲು
ನಾನು ಖುಷಿಯಾಗಿದ್ದೆ, ಈ ಪೆದ್ದ ಸಂಗತಿಗಳಿಗೆ ತಲೆಕೆಡಿಸಿಕೊಳ್ಳುವುದಿರಲಿಲ್ಲ
ಎಲ್ಲಾ ಪರಿಪೂರ್ಣವಾಗಿತ್ತು, ಇರುವುದೆಲ್ಲಾ ಸುಳ್ಳು, ಕಪಟ
ಅಂತ ನಿನಗೆ ಗೊತ್ತಾಗುವವರೆಗೆ
ಹಾಗಾಗಿ ಇಗೋ ಇಲ್ಲಿದ್ದೇನೆ ನಾನು.

ಕನಸು ಕಾಣಲಾಗದೆ ಮೆಟ್ಟಿಬಿದ್ದು ಕುಪ್ಪಳಿಸಿದ್ದು
ಯಾರೋ ಚೀರಿದ ಹಾಗೆ ಕೇಳಿದ್ದು
ನಿನ್ನ ಮನಸಿನ ಹುಚ್ಚು ನನಗೂ ತಟ್ಟಿದೆ
ಎಲ್ಲವೂ ಕುಸಿಯುತಿದೆ.

## ನಿನ್ನಂಥ ದಿನಗಳು

ಆ ದಿನಗಳಿದ್ದವು
ನಿನ್ನಂಥ ದಿನಗಳು ಎಂದು ಕರೆಯುವುದಕ್ಕೆ ಅವನ್ನು, ನನಗಿಷ್ಟ.
ಎಷ್ಟು ಕಡಮೆ ದಿನಗಳು, ಹೋಗಲೆಂದೇ ಬಂದವು, ಅಸಹಾಯಕವಾಗಿ
ಸತ್ತು ಬಿದ್ದಿವೆ, ಹೋಗೇ ಬಿಟ್ಟಿವೆ.

ಎಷ್ಟು ಹೆಣಗಿದ್ದೇನೆ
ನನಗೆ ಸಿಕ್ಕ ಎಲ್ಲ ಶಬ್ದಗಳನ್ನೂ ಬಳಸಿ ದಾರಿ ಹುಡುಕುವುದಕ್ಕೆ ಹೇಗಾದರೂ.
ನೀ ಮತ್ತೆ ಬರುವುದಿಲ್ಲ
ಅನ್ನುವುದು ಮಾತ್ರ ಗೊತ್ತಾಗದಿರಲಿ ನನಗೆ.

ಕೈಲಾದದ್ದನ್ನೆಲ್ಲ ಬದಲಿಸಿದೆ
ಹಳತು, ಹೊಸತು,
ಯಾವುದು ರೀವೈಂಡ್ ಮಾಡಬೇಕೋ ಅದೆಲ್ಲ ಮಾಡಿದೆ.
ಬಾಗಿಲು—ಮತ್ತೆ ಕಂದು ಬಣ್ಣಕ್ಕೆ
ಟೇಬಲ್ಲು—ಮತ್ತೆ ಅದೇ ಮೂಲೆಗೆ
ಫ್ರೆಂಡುಗಳು—ಮತ್ತೆ ಫ್ರೆಂಡು ಮಾಡಿಕೊಂಡೆ
ಮಂಚ—ಮತ್ತೆ ನಾವು ಭೇಟಿಯಾದ ದಿನದಂದು ಇದ್ದ ಹಾಗೆ.

ಮೂಢವಾದ ನಂಬಿಕೆಗೆ ಸಿಗದು ಗೆಲುವು
ಜನ ಮನುಷ್ಯರೇ ಅಲ್ಲ ಅಂದಿತು ಮನಸ್ಸು
ನನ್ನನ್ನೆ ನಂಬಿದೆ, ಯಾವುದೋ ಮೂಲೆಯಲ್ಲಿ
ಬದುಕಿದೆ ಬದಲಾಗಿ ಅಥವಾ ಅಷ್ಟು ಚೆನ್ನಾಗಿರದ ಕಾಲದಲ್ಲಿ ಇದ್ದ ಹಾಗೆ.

ಕಾರಣಗಳು ಆಮೇಲೆ ಇರಲಿ.
ಈಗ ನೆನೆಯುತ್ತೇನೆ



ನಿನ್ನಂಥ ದಿನಗಳು
ಹೋಗಲೆಂದೇ ಬರುವವು.

ಈಗ ಕಳೆದುಕೊಂಡಿರುವೆ
ಸರಪಳಿಯ ಎಲ್ಲ ಕೊಂಡಿಗಳನ್ನು
ನೆನಪಿನ ಓಣಿಗಳನ್ನು
ಇದ್ದಲ್ಲೆ ಸುತ್ತುತ್ತ ಸತತ ಕೇಳುತ್ತಲೇ ಇರುವ ಗ್ರಾಮಫೋನು.
ವಾಪಸು ಕೊಡು
ನಿನ್ನಂಥ ದಿನಗಳನ್ನು.

## ಭೂತ

ಹೆಜ್ಜೆ ಹಾಕುತ್ತಾಳೆ, ಹೆಜ್ಜೆ ಹಾಕುತ್ತಾಳೆ
ಕಡಲ ಅಲೆಗಳು ಬೆರೆತು.
ಕ್ಯಾಬಿನ್ನಿನಲ್ಲಿ ಕೂತಿದ್ದೇನೆ...ಗಾಳಿ ಸುಳಿವು,
ಅವಳೇ ಅದು ಅನ್ನುವ ಹಾಗೆ ಕನಸು ಕಾಣುತ್ತ,
ಯಾಕೆಂದರೆ ಅವಳಿಲ್ಲದೆ ನಾನು ಇಲ್ಲವೇ ಇಲ್ಲ.

ಮಳೆ ಬಿದ್ದಾಗ
ಕೇಳುತ್ತೇನೆ ಅವಳ ಹೆಜ್ಜೆ ಸಪ್ಪುಳ,
ರಾತ್ರಿಯಲ್ಲಿ
ಕೇಳುತ್ತೇನೆ ಬಾಗಿಲು ತಟ್ಟಿದ ಸದ್ದು,
ತೆರೆಯಲಾರೆ;
ನನ್ನ ಮನಸ್ಸಿಗೀಗ ತುಂಬ ಹೆಚ್ಚು ಗೊತ್ತಿದೆ...ಮರುಳಾಗದು.

ರಾತ್ರಿಗಳಲ್ಲಿ ಅಂದುಕೊಳ್ಳುತ್ತೇನೆ
ನಾನಿವತ್ತು ಕಡಲ ಬಗ್ಗೆ ಯೋಚನೆ ಮಾಡಿದ ಹಾಗೆ
ಎದ್ದಿದ್ದರೆ ಅವಳು ಕೂಡ ಯೋಚನೆ ಮಾಡುತ್ತಾಳಾ
ಅಲೆ ಬಂದು ಅಷ್ಟು ಒರಟಾಗಿ
ಅವಳಿಗೆ ಅಪ್ಪಳಿಸಿದ್ದು ಯಾಕೆಂದು.

ಡಿಸೆಂಬರಿನ ಚಳಿಯ ರಾತ್ರಿ,
ಅಲೆಗಳು...ಜೋರಿದ್ದಾಗ
ಶಾಪಹಾಕಿ ಬೈದವು ನನ್ನ ಹಾಗೇ
ನಾನು ಹಾಡಿದೆ ಮೋಡಗಳು ಅತ್ತ ಹಾಗೇ
ನನ್ನ ಕಂಬನಿಗಳು ಹುತಾತ್ಮರಾದವು
ಒಮ್ಮೆ ಇದ್ದ ಅವಳಿಗೇ.



## ಮರದ ಪ್ರೇಮ ಕಥೆ

ನಿನಗೆ ಗೊತ್ತು ಅನ್ನುತ್ತೀ
ನೀನು ಗೊತ್ತು ಅನ್ನುವುದು ಗೊತ್ತಿಲ್ಲ ನನಗೆ.

ಭಾವಿಸುತ್ತೇನೆ ಅನ್ನುತ್ತೀ
ನಿನಗೆ ಏನು ಭಾವಿಸುತ್ತೀಯೋ ಅದೇ ಗೊತ್ತಿಲ್ಲ ನನಗೆ.

ನನ್ನ ಭಾವವನ್ನೇ ಅನ್ನುತ್ತೀ
ನನ್ನ ಅದೇ ಭಾವ ನಿನ್ನದಾಗದು.
ನನ್ನ ಭಾವ ನನ್ನ ಹಾಗೆ ನೀನು ಭಾವಿಸುವುದು ಹೇಗೆ?

ಹುಚ್ಚನ ಹಾಗೆ ದಿಕ್ಕೆಟ್ಟು ಓಡುವೆಯೋ
ಅಥವಾ ಇದ್ದ ಹಾಗೇ ಇರುವೆಯೋ...

ನನ್ನ ಅಹಂಕಾರ ನುಡಿಯುತ್ತದೆ: ನನಗೆ ಯಾರೂ ಬೇಡ,
ಇರುವ ಹಾಗೇ ಅರಾಮ ಇದ್ದೇನೆ ನಾನು.

ಈಗ ನನ್ನ ನುಡಿ:

ಬೀಸಿ ಹೋದ ಗಾಳಿಯ ಹಾಗೆ ನೀನು
ನಿನ್ನಂತೆ ನೀನು ಇರಲು ಬಿಟ್ಟ ಮರದ ಹಾಗೆ ನಾನು...
ನಿನ್ನ ಹಿಡಿದಿಟ್ಟುಕೊಳ್ಳಲು ಅಡ್ಡಿ ಮಾಡಲಿಲ್ಲ ನೀನು...
ನನಗೆ ಗೊತ್ತು ನನಗೆ ಇಷ್ಟವಿರಲಿಲ್ಲ...ನೀನು ಹೋಗಬಾರದು ಅನ್ನುವುದೇ ನನ್ನ ಬಯಕೆ.

ನನ್ನ ಹಾಗೆ ನೀನು ಭಾವಿಸಲಾರೆ.
ಇರಲಿ ಬಿಡು.

ಮುಂದಿನ ಸಾರಿ...ನೀನು ಮರವಾಗು
ನಾನು ಬೀಸುವ ಗಾಳಿಯಾಗುವೆ...ಆಗ ನಿನಗೆ ಗೊತ್ತಾದೀತು...
ನಾನಾಗಿರುವುದೆಂದರೆ ಏನನ್ನಿಸುತ್ತದೆ ಅನ್ನುವುದು.
ಮುಂದಿನ ಸಾರಿ ನಾನು ಗಾಳಿ
ನೀನು ಮರ...
ಹಾಗಾಗಲಿ.

ಹಾಗಾಗುವುದು ಸಾಧ್ಯವಿಲ್ಲವೇನೋ.
ನಾನು ಏನಾಗಿರಬೇಕೋ
ಅದೇ ಆಗಿರುತ್ತೇನೆ, ಮರವಾಗಿ.
ಬಾ ನೀನು ಸಾಧ್ಯವಾದಾಗ
ಬೀಸುವ ಗಾಳಿಯಾಗಿ ಬಂದು ಹರಸು.

ಈಗ ಒಂಟಿಯಾಗಿರುವ ಆಸೆ ನನಗೆ.
ಇನ್ನೊಂದು ಬೀಸು ಗಾಳಿಯ ಪ್ರೀತಿ ಯಾಕೆ ಬೇಕು?
ಹೇಗನ್ನಿಸುತ್ತದೆ ಅನ್ನುವುದು ತಿಳಿಯಬೇಕಿತ್ತು,
ನನ್ನಿಂದ ತಿಳಿದೆ.
ಬಂದು ಹರಸು
ನಿನ್ನ ಗಾಳಿ ತಂಪಿನೊಡನೆ
ಅಷ್ಟು ನನಗೆ ಸಾಕು
ಉಳಿಯಬೇಕಿಲ್ಲ ನೀನು
ಇದು ಹೀಗೇ ಅನ್ನುವುದು ನನಗೆ ತಿಳಿಯಿತು
ಅನ್ನುವುದು ನಿನಗೆ ಗೊತ್ತಾದರೆ ಅಷ್ಟು ಸಾಕು
ನೀನು ಎಂದಿದ್ದರೂ ಹೋಗಬೇಕಾದದ್ದೇ.

ಬಂದು ನೋಡು
ನನ್ನೀ ಬಂಜರು ನೆಲದಲ್ಲಿ
ಕಾಣಲೆಂದು ಇಲ್ಲಿಗೆ ಬರುವ ಬೀಸು ಗಾಳಿ ನೀನು ಮಾತ್ರ
ನಿನಿಗೆ ಬಿಡುವಾಗಿದ್ದಾಗ ಬಾ
ಯಾರು ನನ್ನ ಹೇಗೆ ಅಣಕಿಸುತ್ತಾರೋ ನೋಡು
ನಿನ್ನ ನಾನು ಪ್ರೀತಿಸಿದೆ



ಅದಕ್ಕೇ ಅವರಿಗೆ ಹೊಟ್ಟೆಕಿಚ್ಚು
ಬೀಜ ಬಿತ್ತಿದವನು ನಾನಲ್ಲ
ಇದೆಲ್ಲ ಕಿವಿಗೆ ಹಾಕಿಕೋ ಬೇಡ
ಸುಮ್ಮನೇ ಬಾ
ಪುಟ್ಟ ಬೀಸು ಗಾಳಿಯಾಗಿ ಬಾ

ಅಷ್ಟು ಸಾಕು ನನಗೆ
ಈಗ ಹೊರಟಿದ್ದೀಯಲ್ಲಾ
ನೀನು ಕೊಟ್ಟಿರುವುದನ್ನು
ಎದೆಗೆ ಹತ್ತಿರ ಇಟ್ಟುಕೊಳ್ಳುವೆ
ಸದಾಕಾಲ ಸದಾಕಾಲ
ನಾನು ಒಂಟಿಯಾಗಿರುವುದಕ್ಕೆ ಅಷ್ಟು ಸಾಕು.
ನನ್ನ ಪಾಡಿಗೆ ನಾನರಲು ಬಿಡುವ ಬೀಸುಗಾಳಿ ಇರುವಾಗ
ಇನ್ನೊಂದರ ಪ್ರೀತಿ ಯಾರಿಗೆ ಬೇಕಾಗಿದೆ ಹೇಳು.

ಬಂದು ಹರಸು
ನಿನ್ನ ತಂಪುಗಾಳಿಯೊಡನೆ
ಅಷ್ಟು ಸಾಕು ನನಗೆ
ನನ್ನದೇ ಬಂಜರು ನೆಲದಲ್ಲಿ
ನಾನು ಹಾಗೇ ಕಾಣಬೇಕು
ನಿನಗೆ ಸಾಧ್ಯವಾದಾಗ
ನೀನು ಬಂದಾಗ
ಅದು ನನ್ನ ಆಸೆ.
ಸಹಾನುಭೂತಿ ನನ್ನನ್ನು
ಕರೆತರುವುದು ಈ ದಾರಿಗೆ
ನಿನ್ನೆಲ್ಲ ಕನಸುಗಳೊಂದಿಗೆ ಅನ್ನುವುದು ಗೊತ್ತು...ಅವೇ ನನ್ನ ಭಾವಗಳು,
ನಿನ್ನೊಂದಿಗೆ ಬೀಜವೊಂದು ಕಳಿಸಿಯೇನು ನಾನು
ಎಲ್ಲಿಗೆ ಹೋಗುವೆಯೋ ನೀನು ಅಲ್ಲಿಗೆ
ಹೇಗೆ ಬೆಳೆಯುತ್ತೀಯೋ
ಬೆಳೆದಾಗ ಬೀಜಗಳು...ಅದು ತನ್ನ ಬೀಜಗಳ ಕಳಿಸಿ
ನಡೆದದ್ದನ್ನೆಲ್ಲಾ ನನಗೆ ತಿಳಿಸುತ್ತದೆ

ಹಾಗಾಗಿ ಕೊಂಡೊಯ್ಯಲು ಮರೆಯಬೇಡ
ಸಹಾನುಭೂತಿಯನ್ನು ಮರೆಯಬಹುದು, ನನ್ನನ್ನು ಕೂಡಾ
ಯಾರಿಗೆ ಗೊತ್ತು.

ದಿನಗಳುರುಳುತ್ತವೆ
ಬೇಸಗೆಗಳು ಸತ್ತು ಹುಟ್ಟುತ್ತವೆ
ನಾನು ಸಾಯುತ್ತೇನೆ, ಅಷ್ಟೆ,
ನೀನು ಹೋದಮೇಲೆ ಸಾವು ಅಷ್ಟು ಬೇಗ ಬಂತು.

ಈಗ ಗೊತ್ತಾಗಿದೆ
ನಾನು ತಿಳಿದದ್ದು ತಪ್ಪು
ನೀನೊಂದಿಷ್ಟು ಸಿಕ್ಕರೆ ಸಾಕು
ಕೊನೆಯವರೆಗೆ ಸಾಕೇ ಸಾಕು
ಅಂದುಕೊಂಡಿದ್ದೆನಲ್ಲ.

ಇನ್ನು ಒಂದಷ್ಟು ನಿಮಿಷ...ಅಷ್ಟೆ ಆಯಸ್ಸು.
ನಾವು ಒಟ್ಟಿಗೆ ಇರಲು ವಿಧಿ ಯಾಕೆ ಬಿಡಲಿಲ್ಲ ಗೊತ್ತಾಗಿದೆ.
ನೋಡು, ವಿಧಿಗೆ ಗೊತ್ತಿತ್ತು ನನ್ನ ಅಂತ್ಯ
ನಿನ್ನ ಭವಿಷ್ಯ ನನ್ನ ಕಾಲ ಸಂದಮೇಲೂ ಲಕ್ಷಗಟ್ಟಲೆ ಮೈಲಾಚೆ
ವಿಧಿ ನನ್ನ ಅಣಕಿಸುತ್ತಿರಲಿಲ್ಲ,
ನನ್ನ ಚೆಲುವಿನ ಸ್ಪರ್ಶದ ಆಳದಲ್ಲಿದ್ದ ಕಂಬನಿಯ ಉಳಿಸಿತ್ತು.

ಕತ್ತಲಿಳಿದಾಗ
ನನ್ನ ಎತ್ತಿ ಒಯ್ಯಲು ಅಪ್ಸರೆಯರು ಬರಲಿಲ್ಲ
ಗಾಳಿ ತಂಪುಗಳು ಬಂದವು
ಯಾವ ಗಾಳಿಗೆ ಮಾತ್ರ ಪ್ರವೇಶ ಅಂದಿದ್ದೆನೋ
ಅದು ಮಾತ್ರ ಬರಲಿಲ್ಲ...ನನ್ನ ಮರೆತಿದೆ ಸದಾ ಕಾಲ ನನ್ನ ನೆನಪಿರುವುದು
ಅಂದಿದೆ, ಸದಾ ಕಾಲ,
ಅದಾಗುವುದಿಲ್ಲ ಅನ್ನುವುದು ಗೊತ್ತು
ತಾಳು...ಇಲ್ಲೊಂದು ಗಾಳಿ
ಬೀಜ ಹೊತ್ತು ಬಂದಿದೆ, ನನಗೆ ಪರಿಚಯದ್ದು



ಒಳಗೆ ಬಿಟ್ಟುಕೊಂಡೆ
ಅದರಲ್ಲಿ ಕಂಡೆ...ನನ್ನ ಮುಗುಳು ನಗು,

ಅರಿವಾಯಿತು ನನಗೆ...ಹೀಗೆ ಚೆಲುವಾಗಿರಬೇಕಾದದ್ದು ನೀನು
ಗಾಳಿ ನಿಲ್ಲುವುದಿಲ್ಲ, ಹೊರಟೇ ಬಿಟ್ಟಿದೆ
ಅದರೊಂದಿಗೆ ಕಳಿಸಿರುವೆ ನನ್ನ ಕೊನೆಯ ಭಾವಗಳನ್ನು.

## ಇವತ್ತು ಹಾಗಿರದಿದ್ದರೆ

ಮತ್ತೆ ಇರುತ್ತೇನಾ
ಮೊದಲಿದ್ದ ಹಾಗೆ
ಇವತ್ತು ಒಬ್ಬಂಟಿ ಹುಚ್ಚು ಚಿಂತೆಯ ಅನಾಥ
ಆಗುವುದಕ್ಕೆ ಕಾರಣವಾದ ಎಲ್ಲವೂ ಆಗುವ ಮೊದಲು ಇದ್ದ ಹಾಗೆ.

ಮತ್ತೆ ಇರುತ್ತೇನಾ
ಮೊದಲಿದ್ದ ಹಾಗೆ
ನಾಳೆಯ ಯೋಚನೆಯೇ ಇಲ್ಲದೆ ಇದ್ದೆನಲ್ಲಾ ಹಾಗೆ.
ಇವತ್ತಿಗೇ ಏನಾದರೂ ಉಳಿಸಿಕೊಳ್ಳಬೇಕು, ಇವತ್ತು.

ಮತ್ತೆ ಇರುತ್ತೇನಾ
ಮೊದಲಿದ್ದ ಹಾಗೆ
ಮುಗ್ಧತೆ ಮಳೆಯ ಹಾಗೆ ನನ್ನ ಮೇಲೆ ಸತತ ಸುರಿಯುತ್ತಿತ್ತಲ್ಲಾ
ಮನುಷ್ಯ ಮಾಡಲೇ ಬೇಕಾದ ಕೆಲಸ, ಅಂದರೆ ಏನೂ ಮಾಡದೆ ಇರುವುದು
ಹಾಗೆ.

ಮತ್ತೆ ಇರುತ್ತೇನಾ
ಮೊದಲಿದ್ದ ಹಾಗೆ
ಯಾರೂ ಬೇಕಿರದೆ
ಉತ್ತರವಿಲ್ಲದ ಪ್ರಶ್ನೆಗಳಿರದೆ...
ಕಾಲವೇ ನಿಲ್ಲು ಅಂತ ಅಳುತ್ತಿರುವಾಗ ನನ್ನ
ವಾಪಸ್ಸು ಅಲ್ಲಿಗೆ ಕರಕೊಂಡು ಹೋಗು
ವಾಪಸ್ಸು ಅಲ್ಲಿಗೆ ಕರಕೊಂಡು ಹೋಗು.



## ಯಾನ

ತೀರ್ಮಾನ ಮಾಡಿದ್ದೇನೆ. ಅಂತಿಮ.
ತಪ್ಪು ಅಂದರು. ಸರಿ ಅನ್ನುವುದು ಯಾವುದಾದರೂ ಇದೆಯಾ? ಅನುಮಾನ.
ಯಾವುದೊಂದರ ಮೇಲೂ ಮನಸ್ಸು ನಿಲ್ಲಿಸಲಾರೆವು; ದುಃಖ ವಿಶಾಲ ಬರಡು
ಮರುಭೂಮಿಯ ಹಾಗೆ.
ನಮಗೆ ಹೇಗೆ ಬೇಕೋ ಹಾಗೆ ಮಾಡಬೇಕು.
ಯಾಕೆಂದರೆ ನಿರ್ದಿಷ್ಟ ದಾರಿ ಇಲ್ಲ
ಮ್ಯಾಪು ಕೂಡಾ ಇಲ್ಲ.

## ವಿರೋಧ

ಚೆಲುವು ಅರಸುವುದು ಚೆಲುವನ್ನು.
ನಾನು ಹುಡುಕೆನು ಬೇರೆ ಏನನ್ನೂ.

ಮನುಷ್ಯಕುಲದ ಹೊರೆ ಹೊತ್ತು
ನನ್ನ ಹೊರಗನ್ನು ಮಾತ್ರ ಕಾಣಬಲ್ಲರು ಅವರು.
ಒಳಗು?
ಎಂದಾದರೂ ಕಾಣಬಲ್ಲರೇ?

ಮೊನಚು ಯೋಚನೆ: ಕಂಡಾರು ಹೇಗೆ?
ನಾನು ವಿಶಿಷ್ಟ.
ಹೀಗೇ ಅಂದುಕೊಳ್ಳಬೇಕು ನಾನು
ಈ ಅಗಾಧ ಹುನ್ನಾರಗಳೊಳಗೆ.

ನಾನು ಯಾರೂ ಅಲ್ಲ,
ಮಿಕ್ಕವರ ಹಾಗೇನೇ,
ಸಾಯಲು ಕಾಯುತ್ತಾ
ಕೋಟಿಗಟ್ಟಲೆ ಜೀವಗಳಲ್ಲೊಂದು ಜೀವವಾಗಿ
ಮರುಕ ಮಹತ್ತುಗಳನ್ನು ಭಾವಿಸುತ್ತಾ
ಮಿಕ್ಕವರ ಹಾಗೇ
ಹೊಸತೇನು ಮಾಡಬಲ್ಲೆ ನಾನು?

ಚೆಲುವು ಅರಸುವುದು ಚೆಲುವನ್ನು
ಚೆಲುವಿಗೆ ನನ್ನೊಳಗೇನೂ ಕಾಣದು
ಎಂಥ ಕುರುಡರಿರಬೇಕು ಅವರೆಲ್ಲ
ಅಂತ ನಿಂದಿಸುವುದೂ ಅನ್ಯಾಯವಲ್ಲವಾ?



ಚೆಲುವು ಅರಸುವುದು ಚೆಲುವನ್ನು
ನನ್ನ ಚೆಲುವು ಇನ್ನೂ ಕಾಣಬೇಕಾದದ್ದು.

## ಸರಿಗಳು

ಯಾವುದು ಸರಿ ಯಾವುದು ತಪ್ಪು?

ಮಹಾನ್ ಬಲವಂತನಿಗೆ ಯಾವುದು ನಿಜ?

ಉತ್ತರಗಳು ಸಿದ್ಧವಿರುವಾಗ ಅಚ್ಚರಿಪಡುವುದೇಕೆ ನಾನು; ವೈಚಾರಿಕ ಬದುಕು
ಅಹಂಕಾರಗಳಿಂದ ತುಂಬಿದ್ದು.
ಅಹಂಕಾರ ಎಷ್ಟು ಬಲವೆಂದರೆ, ತಪ್ಪು ಅನ್ನುವ ಪ್ರಶ್ನೆಯೇ ಇರದು.

## ದೇವತೆ

ಕಂಡಿದ್ದೇನೆ
ಒಮ್ಮೆ ಆಳದಲ್ಲಿ ಮತ್ತೆ ನನ್ನ ರಕ್ತದೊಳಗೆ
ಮೂಸಿದ್ದೇನೆ
ನಾಣ್ಯಮಾಡಿ ಮನಸ್ಸಿನಲ್ಲಿ ಮುದ್ರೆಯೊತ್ತಿಕೊಂಡಿದ್ದೇನೆ.

ಕೇಳಿದ್ದೇನೆ
ಶುದ್ಧ ಧ್ವನಿಯಾಗಿ ಮತ್ತೆ ಚೆಲುವಾದ ಚೀರಾಟವಾಗಿ
ಮುಟ್ಟಿದ್ದೇನೆ
ನೋವಿನಲ್ಲಿ ಮತ್ತೆ ಅಭದ್ರತೆಯಲ್ಲಿ.

ನೋಟದಿಂದ ಮರೆಯಾಗಿ
ಎಂದೂ ಇರದಿದ್ದಂತೆ
ಕನಸಿನೊಳಗಿನ ಕನಸಿನಂತೆ
ಭಾವಗಳು ಸದಾ ಮುಟ್ಟಬಲ್ಲ ಎಡೆಯಲ್ಲಿ.



## ಅನ್ಯಾಯವಂತ ಮನುಷ್ಯತ್ವ

ನಾವು ಯಾಕೆ ಹೀಗೆ?
ನಮ್ಮಷ್ಟಕ್ಕೆ ಸತ್ಯವಂತರು ಮಿಕ್ಕವರಿಗೆಲ್ಲ ಸುಳ್ಳುಗಾರರು.
ಇಷ್ಟು ಕಾಲ ಹೇಗೆ ಬದುಕಿ ಬಂದೆವು?

## ಸಾಯುತ್ತ ಇರುವುದೆಂದರೆ

ಅಯ್ಯೋ! ಹೇಗೆ ಹಿಂಡುತ್ತದೆ ಹೃದಯ, ನೋಯುತ್ತದೆ
ನನ್ನ ಪಾಪ ನನ್ನ ನಾಚಿಕೆಗೇಡು ನಿನಗೆ ಹೇಳುವಾಗ
ಕಣ್ಣೀರು ಹರಿದೀತು ಆದರೂ ಆದದ್ದನ್ನು,
ಸಾಯುವಾತ ಮತ್ತೆ ಮಾಡಲಾಗದ ತಪ್ಪುಗಳನ್ನು, ಇಲ್ಲವಾಗಿಸದು.

ಮನೆಯವರು ಗೆಳೆಯರು ಕೊನೆಗೂ ಒಬ್ಬನನ್ನೇ ಬಿಟ್ಟು ಹೋದರು
ಶಾಂತಿ ತಂದುಕೊಳ್ಳುವ ದಾರಿಯಂತೂ ಇಲ್ಲವೇ ಇಲ್ಲ.
ಇಡೀ ಜೀವಮಾನ ಕಳಕೊಂಡವನು ನಾನು
ಈಗ ಕಾಲದೊಂದಿಗೆ ಹೆಜ್ಜೆ ಹಾಕಿ ಹಿಡಿಯಬೇಕು.

ಇದು ನಿವೇದನೆ, ಕೇಳು: ಕನಸು ಕಂಡಿದ್ದೆ,
ದಿನವೂ ಬೆಳಿಗ್ಗೆ, ಮತ್ತೆ ಮಲಗಿದಾಗೆಲ್ಲ.
ನಾಳೆ ಜಗತ್ತನ್ನು ಬದಲಿಸುವ ಕನಸು. ಆಮೇಲೆ ದುಃಖದಲ್ಲಿ
ಹೇಳಿಕೊಳ್ಳುತ್ತಿದ್ದೆ ಮಂಕು ಹತಾಶೆಯಲ್ಲಿ–ನಾಳೆಗೆ ಜಗತ್ತು ಬದಲೇ ಆಗದಷ್ಟು
ದೂರ ಸಾಗಿಬಿಟ್ಟಿರುತ್ತದೆ.
ಕಸನು ಕಾಣುವ ಯುವಕನನ್ನು ಕಂಡಾಗ ಏನೋ ಆಗುತ್ತದೆ–
ನಾನು ಅವನಾಗುವ ಮುಗ್ಧ ಆಸೆ ಹುಟ್ಟುತ್ತದೆ.

ಇನ್ನೂ ಎಷ್ಟು ಕಾಲ ಬದುಕುತ್ತೇನೋ, ಅಯ್ಯೋ!
ಎಲ್ಲಾ ಆಟ ಆಡಿದ್ದಾಯಿತು, ಆತ್ಮೀಯತೆ ತೋರಿದ್ದಾಯಿತು
ಇನ್ನು ಸಾಯುವ ಆಟ ಶುರುಮಾಡಬೇಕು.
ಹೋಗಿಬಿಡುತ್ತೇನೆ, ಜಗತ್ತು ಇದ್ದೀತು, ಛಿದ್ರವಾದೀತು,
ನನ್ನನ್ನಂತೂ ನೆನೆಯದು,
ನನ್ನನ್ನಂತೂ ನೆನೆಯರು!
ನಾನು ಸತ್ತ, ಹೋದ, ಹೂತ ಆತ್ಮ!

ಕಣ್ಣು ಮುಚ್ಚುತ್ತೇನೆ
ಆ ಬದಿಯಲ್ಲಿ ಇನ್ನೂ ಒಳ್ಳೆಯದು ಆದೀತೆಂದು ಮಾತುಕೊಟ್ಟುಕೊಂಡು,
ನೋವು ಸದ್ಯದಲ್ಲೇ ಇಳಿದು ತಗ್ಗಿ ಇಲ್ಲವಾಗುವುದೆಂದು,
ನನ್ನ ಕಣ್ಣು ಜಗತ್ತಿಗೆ ಸಾರುತ್ತದೆ ನಾನು ಸತ್ತೆನೆಂದು.
ಅಳುತ್ತಾರೆ ಕೆಲವರು, ನೆನೆಯುವುದಿಲ್ಲ ಯಾರೂ.
ಕೊರೆವ ಚಳಿಗಾಲದಲ್ಲಿ ನಾನು ಮಾಡಿದ ಸುಕೃತಗಳು
ಅದಕ್ಕಿಂತ ಮಿಗಿಲು ಇನ್ನೇನೂ ಇಲ್ಲ, ಇನ್ನಿಲ್ಲ.
ಈ ಕಂಬನಿ ಒರೆಸಬಲ್ಲೆ, ಅಷ್ಟೆ.
ಜೀವ ಈಗ ತಾನೇ ಹೋಯಿತು.

ಮೊಮ್ಮಗ ಬಂದ–ಮುಗ್ಧವಾಗಿ
ಸತ್ತ ಮನುಷ್ಯ ಸಾಯುವುದನ್ನು ನೋಡಲೆಂದು.
ಅಳಬೇಕು, ವಿವೇಕಿಯಾಗು ಅನ್ನಬೇಕು
ಈ ದುಃಖಿಗಿಂತ ವಿವೇಕಿಯಾಗು ಅನ್ನಬೇಕು
ನಾನತ್ವ...ಅಹಂಕಾರ ಒಂದು ಮಾತೂ ಅನ್ನಲು ಬಿಡುವುದಿಲ್ಲ.
ಇನ್ನೂ ಕಲಿತಿಲ್ಲ ನಾನು.
ಸುಮ್ಮನೆ ಮುಗುಳು ನಗು, ಬೆಸ್ಟ್ ಆಫ್ ಲಕ್ ಹಾರೈಕೆ ಅವನಗೆ.

ಹೆಂಡತಿ ಸತ್ತಿದ್ದಾಳೆ, ಮಗಳು ಇದ್ದಾಳೆ.
ಒಬ್ಬಳೇ ಮಗಳು. ಈಗ ನೆನಪಿರದ
ಕಷ್ಟದ ದಿನಗಳಲ್ಲಿ ಶಾಪವೆಂದು ಕಂಡಿದ್ದವಳು.
ಹೇಳುತ್ತಾಳೆ ಕಣ್ಣೀರಿಡುತ್ತಾ ಕಳೆದ ಕಾಲದ ಬಗ್ಗೆ–



ನಾವು ಮುತ್ತಿಟ್ಟದ್ದು, ಅಪ್ಪಿಕೊಂಡದ್ದು,
ಸದೃಢ ಯುವಕನ ಕನಸುಗಳನ್ನು ಅವನ್ನು ಈಡೇರಿಸಿಕೊಳ್ಳುವ ಹಂಬಲವನ್ನು
ನಾನು ಅವಳಿಗೆ ಹೇಳಿದ್ದು.
ತಟ್ಟನೆ ಮೌನದಲ್ಲಿ ಸುಮ್ಮನಾಗುತ್ತಾಳೆ.
ನಾನತ್ವ...ಅಹಂಕಾರ ಒಂದು ಮಾತೂ ಆಡಲು ಬಿಡುವುದಿಲ್ಲ.
ಇನ್ನೂ ಕಲಿತಿಲ್ಲ ನಾನು.
ಗಟ್ಟಿಯಾಗು, ಬದುಕು ಇಂತಿಂಥ ಕಾರಣಕ್ಕೆ ಅನ್ನುತ್ತೇನೆ ಅವಳಿಗೆ.

ಕೆಮ್ಮು. ಕಾಲು ಜಾಡಿಸಿದ್ದು.
ಸಾಯುವುದು
ಮಗುವಿನ ಕನಸು, ಭವಿಷ್ಯದ ಕನಸು
ಬಿಟ್ಟರೆ ಇನ್ನೇನೂ ಉಳಿದಿಲ್ಲ. ಹೀಗಲ್ಲದಿದ್ದರೆ ನನ್ನಂತ ಸಾವಿನ ಎದುರಲ್ಲಿ
ನೀವು ನರಳಿ ನರಳಿ ಹಿಂಡಿಹೋಗುತ್ತೀರಿ.

## ನಿಜವೋ ಅಂದುಕೊಂಡದ್ದೋ?

ಇದೇ ಇರಬೇಕು ಅದು.
ನನ್ನ ಎದೆ ಮುರಿದದ್ದು, ಕುಸಿದದ್ದು ಕೇಳಿಸಿತು ಅಂದುಕೊಂಡೆ.
ಇದುವರೆಗೂ ಅಷ್ಟು ಚೆನ್ನಾಗಿ ದೃಢವಾಗಿ ಇತ್ತಲ್ಲ.
ಆಹಾ! ಕಾಣುತ್ತಿದೆ ಬೆಳಕು
ನೋಡು ನನ್ನ ಕಿರು ನಗೆ, ಸ್ವರ್ಗದ ಆಜ್ಞೆಗಿಂತ ಗಟ್ಟಿ ಈ ಹೃದಯ ಅಂತ
ಗೊತ್ತಾಗುತ್ತದೆ.

ಇಲ್ಲ, ಇಲ್ಲ...ತಪ್ಪು ತಿಳಿದಿದ್ದೆ.
ಬದುಕಿದ್ದೇನೆ, ಇನ್ನೆಷ್ಟು ಕಾಲವೋ ಗೊತ್ತಿಲ್ಲ.
ಮನುಷ್ಯರು ನಾವು. ಭಾವಿಸಬೇಕು ಅಂತ ಚಿಂತಿಸುತ್ತೇವೆ,
ಅದಕ್ಕಿಂತ ಮಿಗಿಲಾಗಿ ಚಿಂತಿಸಬೇಕು ಅಂತ ಭಾವಿಸುತ್ತೇವೆ.
ನಿಜವೆಂದರೆ ಶಕುನದಂಥ ಕಾಯಿಲೆಯ ಬಲಿಗಳು ನಾವೆಲ್ಲ–
ಅಗತ್ಯವೇ ಇರದಿದ್ದಾಗ
ಭಾವಿಸಬೇಕೆಂದು ಚಿಂತಿಸುತ್ತಾ.



## ಮಳೆ

ನಿಗೂಢ ಶೂನ್ಯಗಳ ತುಂಬುವುದು.
ಆಕಾಶದ ಚಾವಣಿ ಕೆಳಗೆ ಬಚ್ಚಿಟ್ಟುಕೊಂಡು ಕೂತು
ಅಚ್ಚರಿ ಪಡುತ್ತೇನೆ ಆಗಾಗ:

ಬಿಸಿಲಲ್ಲಿ ಬೆರೆತು ಹದವಾಗಿ
ತಕ್ಕಷ್ಟೆ ಸುಳಿವ ಮಳೆ
ಕಂಡಾಗ ಅನಿಸುತ್ತದೆ
ಓಡಬೇಕು ಓಡಿ ಒಂದೊಂದೂ ಹನಿಯ ಮಧ್ಯೆ ನಿಲ್ಲಬೇಕು.
ನನಗೇನೂ ತಾಗುವುದೇ ಇಲ್ಲ...ಅದೃಶ್ಯ ಆಗಿಬಿಟ್ಟಿರಬೇಕು.

ಸಾಗುತ್ತಿರುವ ಕಾಲಕ್ಕೆ ಒರಗಿ
ಒದ್ದೆ ನೆಲದ ಮೇಲೆ ಕೂರುತ್ತೇನೆ
ತುಂಬಲಾಗದ ಸ್ಪೇಸುಗಳನ್ನೆಲ್ಲ ಹನಿಗಳು ತುಂಬುವಾಗ
ಎಷ್ಟು ಚೆಲುವು ಈ ಲೋಕವೆಂದು ಬೆರಗುಪಡುತ್ತಾ
ಎಷ್ಟು ಪರಿಪೂರ್ಣವಾಗಿವೆ ಎಲ್ಲವೂ ಅಂದುಕೊಳ್ಳುತ್ತಾ
ಎಲ್ಲೆಲ್ಲೂ ಬದುಕ ಕಾಣುತ್ತಾ...ಕಾಲ ನನ್ನ ಹೊತ್ತು ಒಯ್ಯುತ್ತದೆ.

## ತಿರುಗು ಬಾಗಿಲು

ಈ ಹಾಡಿನ ಹರಿವಿಗೆ ಅಷ್ಟೇನೂ ಅರ್ಥವಿಲ್ಲ.
ಎಲ್ಲೆ–ಸತ್ತು ಒಣಗಿದ್ದು
ಇನ್ನೂ ಮರೆಯಾಗದ್ದು.
ಮರೆಯಾಗಿದ್ದಿದ್ದರೆ ಈ ಮರ ಹೇಗೆ ಕಾಣುತ್ತಿದ್ದೆ
ಯಾವ ಎಲೆಯೂ ಉದುರದಿದ್ದರೆ ಈ ಎಲೆ...
ನನಗೆ ಅತಿಜ್ಞಾನ, ಒಪ್ಪುತ್ತೇನೆ
ಇದನ್ನು ಹೇಳುವುದಕ್ಕೆ ದೇವರೇನೂ ಬೇಕಾಗಿಲ್ಲ
ದೇವರು ಎಂದೋ ಮುಂದಾಗಿ ಹೇಳಿರಬೇಕಾದ್ದನ್ನು
ಈಗ ದೇವರು ಹೇಳಿದ ಅನ್ನುವವನಗೆ ಕಿಮ್ಮತ್ತಿಲ್ಲ.

ಹೀಗೆ ಕಲ್ಪಿಸಿಕೊಳ್ಳಬೇಡಿ.
ಮೇಲೆಲ್ಲ ಕೆಂಪುತುಂಬಿದ ಕತ್ತಲು
ಕೆಳಗೆ ಪಿಸುಗುಟ್ಟುವ ಹೊದಿಕೆ
ಬೆಳೆಯುತ್ತವೆ ಎಲೆಗಳು
ಬೆಳೆಯುತ್ತಲೇ ಇರುತ್ತವೆ
ಒಂದರ ಮೇಲಿನ್ನೊಂದು
ಆಮೇಲೆ ಸಾಯುತ್ತವೆ.

ಈ ಹಾಡಿನ ಹರಿವಿಗೆ ಅಷ್ಟೇನೂ ಅರ್ಥವಿಲ್ಲ.
ಗಮನಿಸದೆ ಇರಲಾರೆ
ಮನುಷ್ಯ ಎಷ್ಟರ ಮಟ್ಟಿಗೆ ಈ ಎಲೆಗೆ ಒಳಗು
ಎಷ್ಟು ಮಟ್ಟಿಗೆ ಹೊರಗು.
ಎಲ್ಲೆ–ಸತ್ತು ಒಣಗಿದ್ದು
ಇನ್ನೂ ಮರೆಯಾಗದ್ದು.
ಮರೆಯಾಗಿದ್ದಿದ್ದರೆ ಈ ಮರ ಹೇಗೆ ಕಾಣುತ್ತಿದ್ದೆ.



ತೆರಳುವುದಕೆಂದೇ ಬೆಳೆಯುವ ಪ್ರೇಮಿ
ಹೊಳೆ ಹೊಳೆದಷ್ಟೂ ಬಿಸಿಲು
ತುಂಬುವುದೇ ಸರಿ ಕತ್ತಲು
ಆಮೇಲೆ ಮೂಡುವುದು ಇನ್ನೊಂದು ದಿನ
ಅಲೆಗಳು ಏಳುತ್ತವೆ
ಬೀಳುವುದಕ್ಕಷ್ಟೇ. ಮತ್ತೆ ಹುಟ್ಟುವುದಕ್ಕೆ.
ಹೀಗಲ್ಲದೆ ಇನ್ನು ಹೇಗೆ ಕಾಣಲಿ.
ಬೀಳಲಿ, ಇನ್ನೂ ಬೀಳಲಿ...ನಾನು ಕಲಿಯಬೇಕಾದದ್ದು ಇನ್ನೂ ಇದೆ.

## ಅಹಂ ಸಮರ

ನಿನ್ನ ಅಹಂಕಾರದ ಅನಗತ್ಯ ಹೊರೆಗಳೊಡನೆ ಹೋರಾಡುವ ಇಚ್ಛೆ ನನಗಿಲ್ಲ.
ಈ ಪುಟ್ಟ ಕಂಪನಗಳನ್ನು ದಾಟುವುದು ಹೇಗೆಂದು ಕಲಿಸಿದೆ ನನ್ನ ವಿಸ್ತಾರ
ಪ್ರಯಾಣ ಮತ್ತೆ ನನ್ನ ಪತನ.
ಗೊತ್ತಿರದ ಸೀಮೆ ಮತ್ತೆ ಭಯದ ಭಯವಿಲ್ಲವೆಂಬ ಭಾವ.
ಯಾಕೆಂದರೆ ಮನುಷ್ಯನಾಗಿದ್ದೂ ನನಗಾಗೆ ಹೋರಾಡದಿರುವುದು
ಮನುಷ್ಯತ್ವವಲ್ಲ.

ನಿಜವಾದ ಅಧಿಕಾರ ನಿನ್ನಷ್ಟೇ ಮಹತ್ವದ್ದು
ದೊರೆತಾಗ ಅಂಥದೊಂದು ಸಮರ್ಥ ಕಾರಣ ಹೋರಾಡುತ್ತೇನೆ.



## ಎಲ್ಲೋ ಸೂರ್ಯೋದಯ

ಹೊತ್ತು ಬರುತ್ತದೆ, ಖಚಿತ.
ಗೊತ್ತಾಗದಿರಲಿ ಆ ಹೊತ್ತು.

ಗೊತ್ತಾದರೆ,
ಈ ದನಿಗಳು ಏನು ಹೇಳುತ್ತವೆನ್ನುವುದು ಗೊತ್ತಿದೆ.

ಆಡುತ್ತವೆ
ಹುಚ್ಚಿನ ಲಂಚ ಪಡೆದು; ದಂಡ ಕೋರುತ್ತವೆ
ನಾನು ಸುಡದೆ ಬಿಟ್ಟ ಸುಳಿವುಗಳಿಗೆ.

ಪ್ರತಿಧ್ವನಿಸುತ್ತವೆ
ನಾನು ಕೇಳಲು ಮರೆತ, ಸೇಡಿಗಾಗಿ ಪಳಗಿದ ದನಿಗಳು,
ಈಗಿಲ್ಲ.

ಭಾವಿಸುವಂತೆ ಮಾಡುತ್ತವೆ,
ಎಂದೂ ನಿಜವಾಗದವು, ಕ್ಷಮಿಸದ ಪ್ರೇಮಿಯ ಮಾತಿನಂತೆ
ಇನ್ನೂ ಹೊಮ್ಮಿರದ ಮಾತುಗಳು.

ನಿಜ! ಹೋಗಿಬಿಟ್ಟಿರುತ್ತೇನೆ.
ಏನು ಮಾಡಲಿ ನಾನು?
ಈ ಕ್ಷಣದಿಂದ ಅಲ್ಲಿಯವರೆಗೆ ಅಳುತ್ತ ಕೂರಲೇ?
ಮೈಯೆಲ್ಲ ಹುಣ್ಣಾಗಿ ನೋಯುವವರೆಗೆ ಹಾಸಿಗೆಯಲ್ಲೇ ಬಿದ್ದಿರಲೆ?

ಎಲ್ಲೋ ಸೂರ್ಯ ಹುಟ್ಟುವ ಮೊದಲು
ಹೋಗಿಬಿಟ್ಟಿರಬೇಕು ನಾನು–
ನನ್ನ ತಲೆಯೊಳಗಿನ ಈ ದನಿಗಳು ಇರದೆ.

## ಪಳೆಯುಳಿಕೆಯಾದ ಆತ್ಮದ ಮಾತು

ದಿನ ಬಂದು ದಿನ ಹೋಗಿ
ನನ್ನ ಆತ್ಮ ಮರಗಟ್ಟಿ, ಟೊಳ್ಳಾಗಿ, ಜಡ ಪಳೆಯುಳಿಕೆ.

ಯಾರಿಗೆ ಗೊತ್ತಿತ್ತು?
ಎಲ್ಲವೂ ಇಷ್ಟು ಮಂಕಾಗುವುದೆಂದು,
ದಿನದ ಚಲನೆ ಇಷ್ಟು ಜಡವಾಗುವುದೆಂದು.
ಕಂಬನಿ ಧಾರಾಕಾರ ಹರಿಯುವುದೆಂದು,
ಕಣ್ಣಲ್ಲಿ ರಕ್ತವೇ ಸುರಿದೀತೆಂದು,
ಹಂಬಲಗಳು ಯಾಚಿಸಿ ಯಾಚಿಸಿ ಸೋಲುತ್ತವೆಂದು.

ಕಾಣುತ್ತಿರುವೆ,

ನನ್ನ ಕನಸುಗಳೆಲ್ಲ ಸಿಕ್ಕು ಸಿಕ್ಕು ಗಂಟುಬಿದ್ದಿವೆ.

ಕೋಣೆ ಕತ್ತಲಾಗಿದೆ
ಜನರೀಗ ರಾಕ್ಷಸರಾಗಿದ್ದಾರೆ
ನನ್ನ ನೋಯಿಸಿದ ನನ್ನ ನೋಯಿಸಿದ
'ಪ್ರೇಮಿ'ಯ ಬದುಕು ಸುಮ್ಮನೆ ಮುಂದುವರೆದಿದೆ.
ನಾನಿಷ್ಟು ಮರಗಟ್ಟಿದೆನೇ!
ಸುಂದರ ಆತ್ಮದೊಳಗಿನ ರಾಕ್ಷಸನೇ?
ಅಷ್ಟು ಧೈರ್ಯವಿಲ್ಲ ನನಗೆ!

ಹೇಗೆ ಹೋಗಿಬಿಟ್ಟ
'ಪ್ರೇಮಿ' ನೀನು?
ಈಗ ನಿನ್ನ ಎದೆಯಾಳದಲ್ಲಿ ಹೂತು,



ಸದ್ದಿರದೆ, ಬೆಳಕಿರದೆ, ಆರೈಕೆಯಿಲ್ಲದೆ
ಆದರೂ ಅಲ್ಲಿ ಬದುಕಿರುವೆ ನಾನು.

ಹೃದಯದಲ್ಲೇ ಮೌನವಾಗಿ
ಸಾಯುವ ಮೊದಲೇ ಕೊಲೆಯಾಗಿ; ಭ್ರಮೆ ಅನ್ನಬಹುದು ನೀನು,
ಹಾಗಾಯಿತು. ಈಗ ಅಣಕಿಸು.

ಹೇಳುವ ನಿಜವಾದ ಸುಳ್ಳುಗಳು
ಭೂತಗಳೊಳಗೆ ಬದುಕಿರುತ್ತವೆ
ತಣ್ಣನೆ ಸಾವಿನ ಕತೆ,
ನನ್ನ ಪ್ರೀತಿ, ಅದೊಂದು ಬೆದರುಗೊಂಬೆ.
ಯಾಚಿಸಿ ಯಾಚಿಸಿ ಸೋಲುವ ಹಂಬಲಗಳು, ಸೋಲುಗಳು.
ಕನಸುಗಳೆಲ್ಲ ಸಿಕ್ಕು ಸಿಕ್ಕು ಗಂಟುಗಳು.

## ನಿಲ್ಲು

ಯಾಕೆ ಮಾಡಬೇಕು ನಿರ್ಣಯ
ನಾವು ಮಾಡಿದ್ದನ್ನು ಮಾಡಬೇಕಾದ್ದನ್ನು ಕುರಿತು.

ಸೂರ್ಯ ಹೊಳೆಯುತ್ತಲೇ ಇರಬಹುದು, ಆದರೂ ರಾತ್ರಿಹೊತ್ತು
ಹೋಗುತ್ತಾನೆ.
ನನ್ನ ಬದುಕು ಥಂಡಿಯಲ್ಲಿ ಮರಗಟ್ಟಿರಬಹುದು, ಆದರೂ ಮೇ ತಿಂಗಳ
ಬಿರುಬಿಸಿಲೊಂದಿಗೆ ಶುರುವಾಗುವುದು ಬೇಸಗೆ.
ಗಟ್ಟಿ ಕಾಲು ಪಡೆದು ಹುಟ್ಟಿದ ನಾನು ಸದಾ ಓಡುತ್ತಲೇ ಇರುವುದಿಲ್ಲ.
ಆಸೆಯಾದರೂ ಅನಂತದ ಬಗ್ಗೆ ಯೋಚಿಸುವುದಿಲ್ಲ.
ನಿದ್ರೆ ಸುಂದರ. ಆದರೆ ನಾವು ಸದಾಕಾಲ ನಿದ್ದೆಮಾಡುತ್ತಲೇ ಇರುವುದಿಲ್ಲ.
ಹೀಗಿರುವಾಗ ಯಾಕೆ ನಿರ್ಣಯಗಳು.



## ಅಪೀಲು ಇಲ್ಲ

ಅಪೀಲು ಯಾಕೆ ಮಾಡಬೇಕು ನಾನು?
ತೀರ್ಮಾನವಾದ ಹಾಗೇ ನಾನು ಅಪರಾಧಿ,
ನಾನು...ನಾನೇ ಆದವನು.

ನಾನು ನಾನೇ ಆದದ್ದಕ್ಕೆ
ತೋರಿಸಿದ ದಾರಿಯಲ್ಲಿ ನಡೆಯದ್ದಕ್ಕೆ.

ಯುವರ್ ಆನರ್, ನೀವು ವಿವೇಕಿಗಳು.
ನನ್ನ ತಪ್ಪು ಇದೆಯೇ?
ಕಣ್ಣು ಕಂಡವು!

ಮನಸ್ಸು ನೆನೆಯಿತು!
ಯುವರ್ ಆನರ್, ನೀವು ಯಾರೂ ಕುರುಡರಲ್ಲ,
ಹೆದರಬೇಕೆ ನಾನು?
ಕಣ್ಣು ಕಾಣಬಹುದು!
ಮನಸ್ಸು ನೆನೆಯಬಹುದು!

ನನ್ನನ್ನೂ ನನ್ನ ಮನಸ್ಸನ್ನೂ ಬೇರೆಮಾಡುವುದು ನನ್ನದೇ ಕೆಲಸ.
ಮಿಕ್ಕ ಮನುಷ್ಯರಹಾಗಲ್ಲ; ಇಡಿಯಾಗಿದೆ ಅಖಂಡ, ಅವರನ್ನ ಬೈಯುವುದು
ವಿವೇಕವಲ್ಲ.
ಶಿಕ್ಷೆ ಕೊಡಿ ನನಗೆ,
ಹಿಂದಿನ ಅಪರಾಧಗಳಿಗೆ, ಮತ್ತೆ ಮುಂದೆ ಮಾಡುವ ತಪ್ಪುಗಳಿಗೆ,
ನಿಮ್ಮನ್ನು ತೊರೆದು ಹೋಗುವ ದೇವರುಗಳನ್ನು ಕೇಳಿ.

## ಕಳೆದುಹೋದ ಕ್ರಾಂತಿಕಾರಿ

ದುರುಗುಟ್ಟಿ ನೋಡುವ ನೋಟಗಳಿಲ್ಲ ಇನ್ನು,
ಅಸಂಖ್ಯ ಸಂಭಾಷಣೆಗಳಲ್ಲಿ ಇವನ ಆಲೋಚನೆಗಳ ನೆನಪಿದೆಯೇ ಇನ್ನೂ?
ಮಿಂಚಿನಷ್ಟು ಚಂಚಲ ಅಭೀಪ್ಸೆಗಳು
ಮಂಕಾಗಿಸಿವೆ ನನ್ನನ್ನು.

ದುರುಗುಟ್ಟಿ ನೋಡುವ ನೋಟಗಳಿಲ್ಲ, ಇನ್ನು.

ನೀನು ಸ್ನಾನಮಾಡಿ ಸ್ವಚ್ಛವಾದದ್ದು ಗೊತ್ತು,
ಆದರೆ ಅದರಿಂದ ಜಗತ್ತು ಮಾತ್ರ ಎಂದೂ ಬದಲಾಗಲಿಲ್ಲ,
ನನ್ನನ್ನು ಅಷ್ಟು ಸಾಮಾನ್ಯ ಅಷ್ಟು 'ಸ್ವಚ್ಛ'ಮಾಡಿದ್ದು
'ದುಃಖಿ'ಯಾಗಿ 'ಉರಿವ ಕೆಂಗುಲಾಬಿ'ಯಾಗಿ ಮಾಡಿದ್ದು
ಈಗ ಇಂಥ ಸ್ಪಾನ್ಸರರ್ ಪೋಸು ತಳೆಯುವಂತೆ ಮಾಡಿದೆ
ಈಗ ನೀನಾಗಿರುವುದನ್ನು...
ದುರುಗುಟ್ಟಿ ನೋಡುವ ನೋಟಗಳಿಲ್ಲ.



## ಸಹಾನುಭೂತಿ

ನನ್ನ ಮೊದಲ ಹೆಜ್ಜೆಯೆ ದೊಡ್ಡ ತಪ್ಪು
ನಾನಿಡುವ ಕೊನೆಯ ಹೆಜ್ಜೆಯಿಂದ ನಿನಗೆ ಪಶ್ಚಾತ್ತಾಪವಾಗದು.

ನಿನ್ನ ಮುಖ ನೋಡಿದರೆ ತಿಳಿಯುತ್ತಿದೆ
ದುಃಖಬಿಟ್ಟರೆ ಇನ್ನೇನೂ ನನ್ನಲ್ಲಿ ಕಾಣುತ್ತಿಲ್ಲ ನಿನಗೆಂದು.
ನಿನ್ನ ದನಿ ಕೇಳಿದರೆ ತಿಳಿಯುತ್ತಿದೆ
ನಿನ್ನ ಸಹಾನುಭೂತಿಯನ್ನು ನಾನು ಒಪ್ಪಬೇಕೆಂದು.

ಹೇಳುತ್ತೇನೆ ಕೇಳು,
ನಿನ್ನ ಮರುಕ ನನಗಿಷ್ಟ,
ನಾನು ಮೇಲೆ ಹೋದಮೇಲೆ ಕೂಡ
ನನಗದು ಬೇಕು.

## ಬಣ್ಣದ ಆಕಾಶ

ಒಂದು ಕಾಲವಿತ್ತು,
ಬಣ್ಣದ ಆಕಾಶ ಬಳಿಗೆ ಬಂದಿತ್ತು, ಬರಲಿಲ್ಲ ಅದು.
ನಾನಿಲ್ಲೇ ಮುರಿದು ಬೀಳುವವರೆಗೆ, ನಾನು ಸೇರಲು ಮರೆತಿದ್ದ ಜಾಗಕ್ಕೆ
ಮನಸ್ಸು ಎಚ್ಚರಗೊಳ್ಳುವವರೆಗೆ

ಎಲ್ಲಾ ಖಾಲಿಯಾಗಿತ್ತು ಆಗ.
ಜಗತ್ತು ಅದೇ. ಮನಸ್ಸು ಮಾತ್ರ ಮಂಕು,
ಕಣ್ಣು ಉರಿಯುತ್ತಾ ಸುಡುವ ಬಿಸಲನ್ನೇ ನೋಡುತ್ತ ದಿನ ಕಳೆಯುತಿದ್ದೆ.

ಬಣ್ಣದಾಕಾಶದಲ್ಲಿ
ಅಪರಿಚಿತ ನಾಡಿನಲ್ಲೊಬ್ಬ ಅಪರಿಚಿತ.

ಇದೆಲ್ಲ ಆಗುವುದಿಲ್ಲ
ನೀವು ಬಯಸಿದ್ದು ಆಗುವವರೆಗೆ.
ಆಮೇಲೆ ಪತನಗಳು, ಪರಾಜಯಗಳು,
ತಟ್ಟನೆ ಅದು ಹೊತ್ತಿ ಉಜ್ವಲಿಸುವುದು...ಸಾವು ಮಾತ್ರ ಈಗ ನಿವಾರಿಸಬಹುದು
ಅನ್ನಿಸುವಂಥ ಕ್ರೂರ ಪವಾಡಗಳು ಮನಸ್ಸನ್ನು ಉದ್ದೀಪಿಸುವುವು.

ಬಣ್ಣದಾಕಾಶ ತಲುಪಲು ಮುಗಿಲುಗಳ ದಾಟಬೇಕಾಗಲಿಲ್ಲ ನಾನು.
ದೂರ ಹೋಗಬೇಕು ಅಂದುಕೊಂಡರೂ
ದೂರದ ನಕ್ಷತ್ರದ ಹತ್ತಿರವೇ ಎಲ್ಲೋ...ಸಾವಿರ ಯೋಚನೆಗಳು
ಹೋರಾಡುವಲ್ಲಿ
ನನ್ನ ಧೈರ್ಯ ಹತ್ತಬಹುದಾದಷ್ಟು ಎತ್ತರದ ಚಾವಣಿಯ ಮೇಲೆ ಮಲಗಿದ್ದೆ
ಅಷ್ಟೆ.



ಈ ದಿನಗಳು ವಿಚಿತ್ರ ನೆನಪುಗಳಾಗುತ್ತವೆ
ರಾತ್ರಿ ಹೊತ್ತಿನಲ್ಲಿ ಕರುಣೆಯ ನಟಿಸುವ ಸಮಯವಾಗುತ್ತವೆ
ನಾಳೆಯನ್ನು ಕಾಣಬಹುದಾದಷ್ಟು ಸ್ವಾಸ್ಥ್ಯವನ್ನು ಮಾತ್ರ ಉಳಿಸುತ್ತವೆ
ಬೆಳಗಾಗುವ ಹೊತ್ತಿಗೆ ಕಾಲವು ನನ್ನ ಮರೆತಿದೆ ಅನ್ನಿಸುತ್ತದೆ.

ಬಣ್ಣದಾಕಾಶದಲ್ಲಿ
ಗೆಳೆತನದ ನಾಡಿನಲ್ಲೊಬ್ಬ ಗೆಳೆಯ.
ಮತ್ತೆ, ಬೆಳಗಿನಂತೆಯೇ ಎಲ್ಲಾ ಖಾಲಿ.
ಜಗತ್ತು ಅದೇ ಆದರೆ ಮನಸ್ಸು ಮಾತ್ರ ಕಳೆದಿತ್ತು.
ಕಣ್ಣು ನೋಯುತ್ತಾ ಚಂದ್ರನನ್ನು ನೋಡುತ್ತಾ ರಾತ್ರಿಗಳನ್ನು ಕಳೆದೆ.

ಇದೆಲ್ಲ ಸುತ್ತು ಸುತ್ತು ಸುರುಳಿಯಾಗಿ
ಮುರಿದು ಹೋದದ್ದು ಏನು ಅನ್ನುವುದೇ ಒಂದು ದಿನ ಮರೆತುಹೋಗುತ್ತದೆ.

## ನನ್ನ ಹೊರಗಿನವನು

ವಿಚಾರಗಳು ನಾಳೆಗಿರಲಿ
ಕಷ್ಟಗಳೆಲ್ಲ ಇಂದು ಹರಿದು ಹೋಗಲಿ.
ಸಾಯುತ್ತಿರುವ ನಿನ್ನ ಕಣ್ಣಲ್ಲಿ ವಿಶ್ವಾಸವೂ ಇಲ್ಲ ಮಾಧುರ್ಯವೂ ಇಲ್ಲ.
ನಿನ್ನ ಒಂದೊಂದು ಹೆಜ್ಜೆಯೂ ನನ್ನದೇ ದುರಂತ ನಾಟಕ.
ನನಗೆ ಸರಳ ಕ್ರಿಯೆಗಳು, ನನಗೆ ಅತೀವ ನಟಿವು.
ಕರಗಿನ ಹಿಮದ ಮೇಲೆ ಬಿದ್ದ ರಕ್ತದ ಹಾಗೆ
ನಾವು ರಾಜಿಯಾಗುವುದು ಹೇಗೆ
ಕಡಲು ಕರೆಗಳಂತೆ ಒಬ್ಬರಿಗೊಬ್ಬರು ಅಪರಿಚಿತರು.



## ವಿಧಿ

ಆಯ್ಕೆ ಇದೆ ನನಗೆ ಅನ್ನುತ್ತೀಯ;
ಚಿಂತಿಸುತ್ತೇನೆ;
ಪ್ರತಿ ದಿನವೂ ನಾಳೆಗೇ ಗುರಿ ಇಟ್ಟಿರುವಾಗ
ಉತ್ತರಗಳು ಗೊಂದಲಗೊಳಿಸುತ್ತವೆ.

**ಮಂತ್ರಮುಗ್ಧ**

ಹೌದು, ನನಗೆ ಹಲವು ಉದ್ದೇಶ.
ಅದರಲ್ಲಿ ಒಂದು,
ನಿನ್ನ ತಪ್ಪಿತಸ್ಥ ಭಾವನೆಯನ್ನು ಬಸಿದುಬಿಡುವುದು; ಸ್ವಲ್ಪ
ಹೊತ್ತಷ್ಟೇ...ಸುದೀರ್ಘವಾದರೆ ಬಂಧ ಕಳಚೀತು!

ನೀನು ಕಾಣಬೇಕು–
ಬಂದದ್ದೆಲ್ಲ ಹೋಗುವುದೆಂದು
ತಿಂಗಳ ಹಿಂದೆ ಯಾರಿಗೋ ಪ್ರೀತಿಸುತ್ತೇನೆಂದು ಹೇಳಿ ನೀನು
ಈಗ ಅದು ಮಸುಕಾಗಿ ಮತ್ತೆ ಇನ್ನು ಯಾರಿಗೋ ಪ್ರೀತಿ ಧಾರೆ ಎರೆದಿರುವೆ.

ವಾಸ್ತವ ಎಂಥ ಅಗಾಧ ಹುಚ್ಚಿನಂತಿರಬಹುದು
ನಿನ್ನ ಅಪ್ರಬುದ್ಧ ಭಾವಗಳೆಷ್ಟು ಬಲವಾಗಿದ್ದಿರಬಹುದು,
ನೀವಿಬ್ಬರೂ ಅನಂತತೆಯನ್ನೇ ವಾಗ್ದಾನಮಾಡಿಕೊಂಡಿರಿ.

ಕ್ಷಣವು ಅನಂತವಾದರೆ ಮಾತ್ರ ಅನಂತತೆ ದೊರೆತೀತು.
ಆ ಕ್ಷಣ ಹಾಗನ್ನಿಸಿತ್ತು, ಆ ಕ್ಷಣ ಈಗ ಇಲ್ಲವೇ ಇಲ್ಲ.
ಲಕ್ಕಿ ನೀವು, ಅಲ್ಲವಾ

ಮೂಲೆ ಮೂಲೆಯಲ್ಲೂ ಲವ್ವರುಗಳು ಸಿಗುತ್ತಾರಲ್ಲಾ.
ಅವರಿಗೆ ನಮ್ಮ ಮೈಯಷ್ಟೆ ಬೇಕು,
ನಿಮ್ಮ ಚರ್ಮ ಏನು ಹೇಳುತ್ತದೋ ಅಷ್ಟೇ ತಿಳಿಯುವುದು ಅವರಿಗೆ,
ನಿಮ್ಮ ಮಾತು ಅವರ ಕೈಯಲ್ಲಿ ಮಾಡಿಸುತ್ತದೆ,
ಎಷ್ಟು ಮಾಡಿಯಾರು ನಿಮಗಾಗಿ ಏನು ಮಾಡಿಯಾರು?

ನಿಮ್ಮ ಅದೃಷ್ಟದಲ್ಲಿ ಎಷ್ಟು ನರಳಾಟವಿದೆಯೋ...
ಮತ್ತೆ ಅವರಿಗೇ ಅವರಿಗೇ ಬೀಳುತ್ತೀರಿ,
ಅವರು ನಿಮ್ಮನ್ನು ಧೂಳಾಗಿಸುವವರೆಗೆ,
ನೀವು ಅವರನ್ನ ಮಣ್ಣಮುದ್ದೆಯಾಗಿಸುವವರೆಗೆ
ಕ್ರೂರ, ಹೌದು, ನಿಮ್ಮ ಮನಸ್ಸು ನಿಮ್ಮನ್ನೂ ಅವರನ್ನೂ ಹಾಗೆ ಮಾಡಿದೆ.

ಯಾವ ಆತ್ಮದಲ್ಲು ಮುಗ್ಧತೆ ಕಾಣದಿರುವಾಗ
ಲೋಕ ಅಪರಿಚಿತವಾದಾಗ, ಧೂಳು ಮಣ್ಣುಗಳು ಪರಸ್ಪರ
ಉಪಯೋಗವಿಲ್ಲದಾದಾದಗ
ಕಹಿ ಕಂಬನಿ ನಿಮ್ಮ ಬಾಯಿ ತುಂಬಿ ಸಾವಿನ ಯೋಚನೆ ಮನಸಿಗೆ ಬಂದಾಗ
ಮರು ಹುಟ್ಟಿಗೆ ನನ್ನ ಬಳಿಗೆ ಬನ್ನಿ.

* * * *